Policy document 2020-21 8/8

221 (3)

PRINCIPAL
J.S.S. Institute of Education
P.B. 26, SAKALESHPUR-57
Hassan Dist.

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

**ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-09**

ದೂರವಾಣಿ-22228805, 22483140, 22483145 email :cackarnataka@gmail.com

ಸಂಖ್ಯೆ:ಸಿಎಸಿ-04/ಬಿ.ಇಡಿ.ದಾ./01/2020-21 ದಿನಾಂಕ:13-01-2021

# ಅಧಿಸೂಚನೆ

ವಿಷಯ: 2020-21 ನೇ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸ್‌ಗೆ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಮತ್ತು ಹಂಚಿಕೆ.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ. ಇಡಿ 10 ಯುಬಿಸಿ 99, ಬೆಂಗಳೂರು, ದಿನಾಂಕ: 3.6.1999.

2. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1252).
3. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1253)
4. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1255)
5. ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2013, ಬೆಂಗಳೂರು, ದಿನಾಂಕ: 12-11-2013.
6. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 20-11-2015
7. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 04-12-2015.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬೆಂಗಳೂರುರವರ ಪತ್ರ ಸಂ:ಇಡಿ 298 ಯುಆರ್‌ಸಿ 2016ದಿ:17/10/2016.
9. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಇಡಿ.205.ಯುಆರ್‌ಸಿ.2017, ದಿ: 07-12-2020
10. ಈ ಕಛೇರಿಯ ಪತ್ರ ಸಂಖ್ಯೆ: ಸಿಎಸಿ-05/ಬಿ.ಇಡಿ.ದಾ-01/2020-21, ದಿನಾಂಕ: 20-03-2020 & 13-10-2020. ಇದರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಕಾಲೇಜುಗಳ ವಿವರ.

************

2020-21ನೇ ಶೈಕ್ಷಣಿಕ ಸಾಲಿಗೆ **ಎರಡು ವರ್ಷಗಳ ಬಿ.ಇಡಿ.** ಕೋರ್ಸಿನ ವ್ಯಾಸಂಗಕ್ಕಾಗಿ ದಾಖಲಾತಿ ಸಂಬಂಧ ಉಲ್ಲೇಖ (10) ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ-1ರಂತೆ ಕರೆಯಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್ www.schooleducation.kar.nic.in ನಲ್ಲಿ "**ONLINE APPLICATION FOR ADMISSION TO TWO YEAR B.Ed. COURSE FOR THE YEAR 2020-21**" ಎಂಬುದನ್ನು ಕ್ಲಿಕ್ ಮಾಡಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಈ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮುನ್ನ ವೆಬ್‌ಸೈಟ್‌ನಲ್ಲಿರುವ "Instructions to the candidates" ಶೀರ್ಷಿಕೆಯಡಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡುವುದು. **ಅಭ್ಯರ್ಥಿಗಳು "ONLINE" ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡಬೇಕು. ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡಬೇಕು. "ONLINE" ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.**

**ಸೂಚನೆ:**

ಅಭ್ಯರ್ಥಿಗಳು ತಮ್ಮ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಹಾಜರಾಗಲು ಬಯಸುವ ಜಿಲ್ಲಾ ನೋಡೆಲ್ ಕೇಂದ್ರ/ ವ್ಯವಸ್ಥಾಪಕ ಕೇಂದ್ರ **(DIET/CTE)** ಗಳನ್ನು **ಅನುಬಂಧ-04**ರಲ್ಲಿ ನೀಡಲಾಗಿದೆ. ಅದರಂತೆ, ಅಭ್ಯರ್ಥಿಗಳು ಬಯಸುವ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳನ್ನು ಅರ್ಜಿಯಲ್ಲಿ ಆಯ್ಕೆಮಾಡಿಕೊಳ್ಳುವುದು.

**"ONLINE" ಅರ್ಜಿಗಳನ್ನು ದಿನಾಂಕ: 13-01-2021 ರಿಂದ ದಿನಾಂಕ: 26-01-2021 ರ ರಾತ್ರಿ 12.00ರ ಒಳಗಾಗಿ ಸಲ್ಲಿಸುವುದು.**

**ಅರ್ಜಿ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ "ONLINE" ಮೂಲಕ ಅಂದರೆ ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, UPI ಹಾಗೂ ಡೆಬಿಟ್ ಕಾರ್ಡ್ ಮೂಲಕವೇ ಪಾವತಿಸತಕ್ಕದ್ದು. ಇನ್ಯಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.**

**"ONLINE" ಅರ್ಜಿಗಳನ್ನು ಭರ್ತಿ ಮಾಡುವಾಗ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ, ದ್ವಂದ್ವ ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

## ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಪಾವತಿಸಬೇಕಾದ ಶುಲ್ಕ

| ಕ್ರ.ಸಂ | ವಿವರ | ಶುಲ್ಕ |
|---|---|---|
| 1 | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಪ್ರವರ್ಗ-1 | **ರೂ. 100-00** |
| 2 | ಅಂಗವಿಕಲ ಅಭ್ಯರ್ಥಿಗಳಿಗೆ | **ಶುಲ್ಕ ವಿನಾಯಿತಿ ನೀಡಿದೆ.** |
| 3 | ಇತರೆ ಅಭ್ಯರ್ಥಿಗಳು | **ರೂ. 300-00** |

ಬಿ.ಇಡಿ ಕೋರ್ಸಿಗೆ ದಾಖಲಾಗುವ ಸರ್ಕಾರಿ ಕೋಟಾದ ಅಭ್ಯರ್ಥಿಗಳಿಗೆ ಅನ್ವಯಿಸುವ ನಿಯಮ ಹಾಗೂ ಅರ್ಹತೆಗಳು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ದಾಖಲಾಗುವ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

**ಷರತ್ತುಗಳು:**

2020-21ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆ ಹಾಗೂ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ ಈ ಕೆಳಗಿನ ಷರತ್ತುಗಳನ್ವಯ ಬದಲಾವಣೆಗಳಿಗೆ ಒಳಪಡುತ್ತವೆ.

1. ನ್ಯಾಯಾಲಯದ ತೀರ್ಮ ಮತ್ತು ಆದೇಶಗಳು.
2. ಎನ್.ಸಿ.ಟಿ.ಇ. ಮಾರ್ಗಸೂಚಿ.
3. ಉನ್ನತ ಶಿಕ್ಷಣ ಸಚಿವಾಲಯದ ಸುತ್ತೋಲೆ ಹಾಗೂ ಆದೇಶಗಳು.
4. ಕರ್ನಾಟಕ ರಾಜ್ಯದ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನಿರ್ಣಯಗಳು ಮತ್ತು ಆದೇಶಗಳು.
5. ಇತರೆ ಯಾವುದೇ ಸಂವಿಧಾನ ಬದ್ಧ ಆದೇಶಗಳು.

**ಅರ್ಹತೆಗಳು:**

1. ಸರ್ಕಾರಿ ಕೋಟಾದ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.
2. 10+2+3/4 (ಎಸ್.ಎಸ್.ಎಲ್.ಸಿ + 2 ವರ್ಷದ ಪಿ.ಯು.ಸಿ + 3/4 ವರ್ಷದ ಪದವಿ) ಕ್ರಮದ ವಿದ್ಯಾರ್ಹತೆಯನ್ನು ಹೊಂದಿರಬೇಕು.

**"ಕರ್ನಾಟಕದ ಅಭ್ಯರ್ಥಿ ಎಂದರೆ"**

(ಅ) ಸರ್ಕಾರಿ ಶಿಕ್ಷಣ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು. **ಹಾಗೂ**

(ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ **ಅಥವಾ** ದ್ವಿತೀಯ ಪಿ.ಯು.ಸಿ./ 12ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

(ಇ) ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು **ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸ ಮಾಡಿದ** ಬಗ್ಗೆ **ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.**

ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ರಾಜ್ಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ / ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ **"ಖಾಸಗಿ ಅಭ್ಯರ್ಥಿ"** ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

**ವಿದ್ಯಾರ್ಹತೆ:**

**ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.**

(ಎ) ಕನಿಷ್ಠ ಶೇ.50 ಅಂಕಗಳೊಂದಿಗೆ ಪದವಿ **ಅಥವಾ** ಶೇ.50 ಅಂಕಗಳೊಂದಿಗೆ ವಿಜ್ಞಾನ/ ಸಾಮಾಜಿಕ ವಿಜ್ಞಾನಗಳು/ಮಾನವಿಕ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳು.

ಕನಿಷ್ಠ ಶೇ.55ರಷ್ಟು ಅಂಕಗಳೊಂದಿಗೆ ಇಂಜಿನಿಯರಿಂಗ್ ನಲ್ಲಿ ಪದವಿ/ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವ ತಂತ್ರಜ್ಞಾನ ಅಥವಾ ಇನ್ನಾವುದೇ ತತ್ಸಮಾನ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು.

[Candidates with at least fifty percent marks either in the Bachelor's Degree and/or in the Master's Degree in Sciences/Social Sciences/Humanity, Bachelor's in Engineering or Technology with specialization in Science and Mathematics with 55% marks or any other qualification equivalent thereto, are eligible for admission to the programme.]

**ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ಪ್ರವರ್ಗ-1/ ವಿಕಲಚೇತನ (PWD) ಅಭ್ಯರ್ಥಿಗಳಿಗೆ (ಈ ಮೇಲೆ ತಿಳಿಸಲಾದ ಕನಿಷ್ಠ ಶೇಕಡವಾರು ಅರ್ಹತಾ ಅಂಕಗಳಲ್ಲಿ) ನಿಯಮಾನುಸಾರ ಶೇ.5ರಷ್ಟು ಅಂಕ ವಿನಾಯಿತಿ ಇರುತ್ತದೆ.**

(ಬಿ) ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ **(Subsidiary Subjects)** ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ, (ಈ ಬಗ್ಗೆ ಅಂಕಪಟ್ಟಿಯ Footnote ನಲ್ಲಿ ನಮೂದಿಸಿದ್ದಲ್ಲಿ ಮಾತ್ರ) ಆ ಅಂಕಗಳನ್ನು ಸೇರಿಸಿ ಅರ್ಜಿಯಲ್ಲಿ ಭರ್ತಿ ಮಾಡುವುದು. ಪದವಿಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿಗಳಲ್ಲಿ ನಮೂದಿಸಲಾದ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಪರಿಗಣಿಸಲಾಗುವುದು.

3. ಸರ್ಕಾರಿ/ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು **ಸೇವಾ ಪ್ರಮಾಣ ಪತ್ರ** ಮತ್ತು ಅಭ್ಯಾಸ ಮಾಡಲು ಸಕ್ಷಮ ಅಧಿಕಾರಿಗಳಿಂದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಮತ್ತು **ಸರ್ಕಾರದಿಂದ ಪಡೆದ ಅನುಮತಿ ಪತ್ರ**ಗಳನ್ನು, ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಉದ್ಯೋಗದಾತರಿಂದ ಪಡೆದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ದಾಖಲಾತಿ ಸಮಯದಲ್ಲಿ ಸಲ್ಲಿಸುವುದು. ಸೇವೆಯಲ್ಲಿರುವ ಶಿಕ್ಷಕರಿಗೆ ಯಾವುದೇ ಮೀಸಲಾತಿ/ ವಿನಾಯತಿ ಇರುವುದಿಲ್ಲ.
4. 2020-21 ನೇ ಸಾಲಿನ ಬಿ.ಇಡಿ ದಾಖಲಾತಿ ಅಧಿಸೂಚನೆ ಹೊರಡಿಸಿದ ದಿನಾಂಕದ ಪೂರ್ವದಲ್ಲಿ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

## ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:

(ಅ) **ರಕ್ಷಣಾ ದಳದವರು** :

**1)** ದಿನಾಂಕ: 01-07-2019 ರಿಂದ 30-06-2020ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ಉತ್ತೀರ್ಣರಾಗಿರಬೇಕು.

**ಅಥವಾ**

**2)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗೆಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

**ಅಥವಾ**

**3)** ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಶಾಂತಿಭಂಗ ಸ್ಥಳಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು ಇಂತಹ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ "Broucher" ನ ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-02**ರಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ **ಸೈನಿಕ ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

**ಸೂಚನೆ:** (ಅ) ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲಾಗುವುದು.

(ಆ) **ಮಾಜಿ ಸೈನಿಕರು**:

1. ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂಸೇನೆ, ವಾಯುಸೇನೆ ಹಾಗೂ ನೌಕಾ ಸೇನೆಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸುತ್ತಿದ್ದು ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ ಮತ್ತು ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು.

**ಅಥವಾ**

2. ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

3. ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

4. ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ತಿಳಿಸಿದ ಸಿಬ್ಬಂದಿ.

ಅ) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ.

ಆ) ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರರು.

ಇ) ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ, ಶೌರ್ಯ ಪ್ರಶಸ್ತಿ (ಗ್ಯಾಲಂಟ್ರಿ ಅವಾರ್ಡ್ಸ್) ವಿಜೇತರು, ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ, ದಿನಾಂಕ: 01-07-87ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

**ಸೂಚನೆ:-**

1. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳು ಅಥವಾ ರಾಜ್ಯ ಸರ್ಕಾರ ನಡೆಸುತ್ತಿರುವ ವಿದ್ಯಾ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯನ್ನು ಇಂತಹ ಅಭ್ಯರ್ಥಿಯು ಉತ್ತೀರ್ಣರಾಗಿರಬೇಕು.
2. ಮಾಜಿ ಸೈನಿಕರು ಅಥವಾ ಅವರ ಪತಿ/ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು "Broucher" ನ ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-03ರ** ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಪಡೆದ **ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

(ಇ) **ಗಡಿನಾಡು ಕನ್ನಡಿಗರು**: ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಪ್ರದೇಶದಲ್ಲಿದ್ದು, ಕನ್ನಡ ಮಾತನಾಡುವ ಕನ್ನಡ/ಕೊಡವ/ತುಳು ಮಾತೃಭಾಷೆಯಾಗಿರುವ ಅಭ್ಯರ್ಥಿಗಳು. ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಢಿಂಗ್ಲಾಜ್ ತಾಲ್ಲೂಕುಗಳು **ಅಥವಾ** ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವವರು. ಈ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.**

1. ಮಾತೃಭಾಷೆ ಕನ್ನಡ, ಕೊಡವ, ತುಳು ಆಗಿರುವ ಬಗೆಗೆ ವ್ಯಾಸಂಗ ಮಾಡಿದ ಸಂಸ್ಥೆಯ/ಶಾಲೆಯ ಮುಖ್ಯಸ್ಥರಿಂದ **ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ** ಪಡೆದಿರಬೇಕು. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (**ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)

2. ಅಭ್ಯರ್ಥಿಯು ಕನ್ನಡ ಮಾತನಾಡುವ ವಿವಾದಗ್ರಸ್ಥ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗೆಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ **ವಾಸಸ್ಥಳದ ಪ್ರಮಾಣ ಪತ್ರ** ಪಡೆದಿರಬೇಕು.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಗಡಿನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಒಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಈ) **ಹೊರನಾಡು ಕನ್ನಡಿಗರು**: ಹೊರನಾಡು ಕನ್ನಡಿಗರು ಎಂದರೆ, ಅಭ್ಯರ್ಥಿಯು ದಾಖಲಾತಿ ಬಯಸುವ ವರ್ಷದ ಜುಲೈ 1ಕ್ಕೆ ಕನಿಷ್ಟ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರಬೇಕು ಮತ್ತು ಅವರ ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರಬೇಕು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯ/ ಪರೀಕ್ಷಾ ಮಂಡಳಿ/ ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಒದಗಿಸಬೇಕು.**

1. ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ಅಭ್ಯರ್ಥಿಯು ವ್ಯಾಸಂಗ ಮಾಡಿದ ಸಂಸ್ಥೆಯ/ ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. ("Broucher"ನ ಕೊನೆಯಲ್ಲಿ ನಿಗದಿತ **ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ದಿನಾಂಕ 01-07-2020ಕ್ಕೆ ಅಭ್ಯರ್ಥಿಯು ಕನಿಷ್ಟ ಐದು ವರ್ಷಗಳ ಕಾಲ ಎಂದರೆ ಜುಲೈ 2015 ರಿಂದ ಇಲ್ಲಿಯವರೆಗೆ ಹೊರ ರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದ ಅಭ್ಯರ್ಥಿಗಳನ್ನು ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಐಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

**(ಉ) ಎನ್.ಸಿ.ಸಿ. ಕೆಡೆಟ್ಸ್:**

**(i)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

**ಅಥವಾ**

**(ii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)
(ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)
(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ
(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್ ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ)ಯನ್ನು ಪೂರ್ಣಗೊಳಿಸಿರಬೇಕು.

**(iii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಈ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ "ಬಿ" ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ
(ಆ) ಚಾರಣ ಶಿಬಿರ
(ಇ) ಪರ್ವತಾರೋಹಣ ಕೋರ್ಸು

(ಈ) ಮೂಲ ನಾಯಕತ್ವ ಶಿಬಿರ

(ಉ) ಉನ್ನತ ನಾಯಕತ್ವ ಶಿಬಿರ

(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್

(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

(iv) ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು.

**ಮೊದಲನೆಯದಾಗಿ** ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. **ಎರಡನೆಯದಾಗಿ** ಅನುಚ್ಛೇದ 1 ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. **ಮೂರನೆಯದಾಗಿ** ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. **ನಾಲ್ಕನೆಯದಾಗಿ** ಕರ್ನಾಟಕದಿಂದ ಅನುಚ್ಛೇದ (ii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. **ಐದನೆಯದಾಗಿ** ಕರ್ನಾಟಕದಿಂದ ಅನುಚ್ಛೇದ (iii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. **ಆರನೆಯದಾಗಿ** ಅನುಚ್ಛೇದ (V)ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iv) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆ ಮಾಡಿಕೊಳ್ಳಬಹುದು.

**(ಊ) ಎನ್.ಎಸ್.ಎಸ್. ಸ್ವಯಂ ಸೇವಕರು:** ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಠ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಠ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗೆಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

**(ಋ) ಕ್ರೀಡಾಪಟುಗಳು:** ತರಗತಿ 8 ರಿಂದ ಅಂತಿಮ ಪದವಿವರೆಗಿನ ವ್ಯಾಸಂಗದ ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು : 1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ 2. ವಿಶ್ವವಿದ್ಯಾಲಯ 3. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ. ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು.

ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು (ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ) ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ ಇವರು **ಹಕ್ಕು** ಹೊಂದಿರುತ್ತಾರೆ.

## ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲಾತಿ

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇಕಡಾ 1.00 ರಷ್ಟು ಸೀಟುಗಳನ್ನು ಪ್ರಚಲಿತ ನಿಯಮದನ್ವಯ ತುಂಬಲಾಗುವುದು.

| | | |
|---|---|---|
| 1 | ರಕ್ಷಣಾದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.13 % |
| 2 | ಮಾಜಿಸೈನಿಕ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.15 % |
| 3 | ಗಡಿನಾಡು ಕನ್ನಡಿಗ | 0.10 % |
| 4 | ಹೊರನಾಡು ಕನ್ನಡಿಗ | 0.10 % |
| 5 | ಎನ್.ಸಿ.ಸಿ. ಕೆಡೆಟ್ಸ್ | 0.15 % |
| 6 | ಎನ್.ಎಸ್.ಎಸ್. ಸ್ವಯಂ ಸೇವಕರು | 0.13 % |
| 7 | ಕ್ರೀಡಾಪಟುಗಳು | 0.24 % |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಶೇಕಡ 50 ರಷ್ಟು ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹಾಗೂ ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

ಆದರೆ ವಿಜ್ಞಾನ ವಿಭಾಗದ ಒಟ್ಟು ಸೀಟುಗಳ ಪೈಕಿ ಶೇಕಡಾ 60 ರಷ್ಟು ಸೀಟುಗಳನ್ನು ಪಿ.ಸಿ.ಎಂ. ಗುಂಪಿನಿಂದಲೂ ಹಾಗೂ ಶೇಕಡ 40 ರಷ್ಟು ಸೀಟುಗಳನ್ನು ಸಿ.ಬಿ.ಝಡ್ ಗುಂಪಿನಿಂದಲೂ ಆಯ್ಕೆ ಮಾಡಲಾಗುವುದು. ಯಾವುದೇ ಒಂದು ಗುಂಪಿನಲ್ಲಿ ಅಂದರೆ ಪಿ.ಸಿ.ಎಂ. ಅಥವಾ ಸಿ.ಬಿ.ಝಡ್ ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದ ಪಕ್ಷದಲ್ಲಿ ಅಂತಹ ಸೀಟುಗಳನ್ನು ಅದೇ ವಿಭಾಗದ ಮತ್ತೊಂದು ಗುಂಪಿನಿಂದ ಆಯ್ಕೆ ಮಾಡಲಾಗುವುದು.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

Different Categories Reservation Policy

**ವಿವಿಧ ಪ್ರವರ್ಗಗಳಿಗೆ ಮೀಸಲಾತಿ:**

ವಿವಿಧ ಪ್ರವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ಮೀಸಲಾತಿಯಲ್ಲಿ ಬದಲಾವಣೆಯಾಗಬಹುದು.

| | | |
|---|---|---|
| 1 | ಸಾಮಾನ್ಯ ವರ್ಗ | ಶೇಕಡಾ 50 |
| 2 | ಪರಿಶಿಷ್ಟ ಜಾತಿ | ಶೇಕಡಾ 15 |
| 3 | ಪರಿಶಿಷ್ಟ ಪಂಗಡ | ಶೇಕಡಾ 03 |
| 4 | ಪ್ರವರ್ಗ–1 | ಶೇಕಡಾ 04 |
| 5 | ಪ್ರವರ್ಗ–2ಎ | ಶೇಕಡಾ 15 |
| 6 | ಪ್ರವರ್ಗ–2ಬಿ | ಶೇಕಡಾ 04 |
| 7 | ಪ್ರವರ್ಗ–3ಎ | ಶೇಕಡಾ 04 |
| 8 | ಪ್ರವರ್ಗ–3ಬಿ | ಶೇಕಡಾ 05 |

| | | |
|---|---|---|
| 1 | General | 50% |
| 2 | Scheduled Caste | 15% |
| 3 | Scheduled Tribe | 03% |
| 4 | Category - I | 04% |
| 5 | Category - 2A | 15% |
| 6 | Category - 2B | 04% |
| 7 | Category - 3A | 04% |
| 8 | Category - 3B | 05% |

ಮೇಲ್ಕಂಡ ಮೀಸಲಾತಿ ಅನ್ವಯ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮೀಸಲಾತಿಯನ್ನು ಲಭ್ಯವಿರುವ ಮಿತಿಗೆ ಸೀಮಿತಗೊಳಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ತುಂಬಲಾಗುವುದು.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

Reservation Policy Document 10/18
2021-22

22 (3)

ಪ್ರಾಂಶುಪಾಲರು
ಜಿ.ಎಸ್.ಎಸ್. ಶಿಕ್ಷಣ ಮಹಾ ವಿದ್ಯಾಲಯ
ಪಿ.ಬಿ. ನಂ. 26
ಸಕಲೇಶಪುರ-573 134


**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,**

**ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-09**

ದೂರವಾಣಿ-22228805, 22483140, 22483145 email :cackarnataka@gmail.com


ಸಂಖ್ಯೆ:ಸಿಎಸಿ-04/ಬಿ.ಇಡಿ.ದಾ./01/2021-22 ದಿನಾಂಕ:23-09-2021

## ಅಧಿಸೂಚನೆ

ವಿಷಯ: 2021-22 ನೇ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸ್‌ಗೆ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಮತ್ತು ಹಂಚಿಕೆ.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ. ಇಡಿ 10 ಯುಬಿಸಿ 99, ಬೆಂಗಳೂರು, ದಿನಾಂಕ: 3.6.1999.

2. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1252).
3. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1253)
4. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1255)
5. ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2013, ಬೆಂಗಳೂರು, ದಿನಾಂಕ: 12-11-2013.
6. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 20-11-2015
7. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 04-12-2015.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬೆಂಗಳೂರುರವರ ಪತ್ರ ಸಂ:ಇಡಿ 298 ಯುಆರ್‌ಸಿ 2016ದಿ:17/10/2016.
9. ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಇಡಿ.205.ಯುಆರ್‌ಸಿ.2017, ದಿ: 07-12-2020
10. ಈ ಕಛೇರಿಯ ಪತ್ರ ಸಂಖ್ಯೆ: ಸಿಎಸಿ-05/ಬಿ.ಇಡಿ.ದಾ-01/2020-21, ದಿನಾಂಕ:08-07-2021 ಮತ್ತು 14-09-2021 ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಕಾಲೇಜುಗಳ ವಿವರ.
11. ಸರ್ಕಾರದ ಅಧೀನ ಕಾರ್ಯದರ್ಶಿ,ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ),ಬೆಂಗಳೂರು ರವರ ಪತ್ರ ಕ್ರಮ ಸಂಖ್ಯೆ: ಇಡಿ.96.ವಿವಿಧ 2021, ದಿನಾಂಕ:17-09-2021.

*************

2021-22ನೇ ಶೈಕ್ಷಣಿಕ ಸಾಲಿಗೆ **ಎರಡು ವರ್ಷಗಳ ಬಿ.ಇಡಿ.** ಕೋರ್ಸಿನ ವ್ಯಾಸಂಗಕ್ಕಾಗಿ ದಾಖಲಾತಿ ಸಂಬಂಧ ಉಲ್ಲೇಖ (10) ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ-1ರಂತೆ ಕರೆಯಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್ www.schooleducation.kar.nic.in ನಲ್ಲಿ "**ONLINE APPLICATION FOR ADMISSION TO TWO YEAR B.Ed. COURSE FOR THE YEAR 2021-22**" ಎಂಬುದನ್ನು ಕ್ಲಿಕ್ ಮಾಡಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಈ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮುನ್ನ ವೆಬ್‌ಸೈಟ್‌ನಲ್ಲಿರುವ "Instructions to the candidates" ಶೀರ್ಷಿಕೆಯಡಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡುವುದು. **ಅಭ್ಯರ್ಥಿಗಳು "ONLINE" ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡತಕ್ಕದ್ದು, ಅಂತೆಯೇ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡುವುದು. "ONLINE" ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.**

**ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ**

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಮೊದಲು ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್‌ಸೈಟ್ http://schooleducation.kar.nic.in ನೀಡಲಾದ ಅಭ್ಯರ್ಥಿಗಳಿಗೆ ಸೂಚನೆಗಳನ್ನು ಓದಿ ಅರ್ಥೈಸಿಕೊಳುವುದು.

- **"ONLINE" ಅರ್ಜಿಗಳನ್ನು ದಿನಾಂಕ: 23-09-2021 ರಿಂದ 13-10-2021ರ ರಾತ್ರಿ 12.00ರ ಒಳಗಾಗಿ ಸಲ್ಲಿಸುವುದು.**

- **Registration** ಮತ್ತು **Login** ನೊಂದಿಗೆ ಆನ್‌ಲೈನ್ ಅರ್ಜಿಯನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡುವುದು.

- ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಭಾವಚಿತ್ರ (50 KB ಕ್ಕಿಂತಲೂ ಕಡಿಮೆ) ಹಾಗೂ ಸಹಿಯನ್ನು (40 KB ಕ್ಕಿಂತಲೂ ಕಡಿಮೆ) ಅಪ್‌ಲೋಡ್ ಮಾಡುವುದು.

- ಅಭ್ಯರ್ಥಿಗಳು ತಮ್ಮ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಹಾಜರಾಗಲು ಬಯಸುವ ಜಿಲ್ಲಾ ನೋಡೆಲ್ ಕೇಂದ್ರ/ ವ್ಯವಸ್ಥಾಪಕ ಕೇಂದ್ರ **(CTE/DIET)** ಗಳನ್ನು **ಅನುಬಂಧ-04**ರಲ್ಲಿ ನೀಡಲಾಗಿದೆ. ಅದರಂತೆ, ಅಭ್ಯರ್ಥಿಗಳು ಬಯಸುವ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳನ್ನು ಅರ್ಜಿಯಲ್ಲಿ ಆಯ್ಕೆಮಾಡಿಕೊಳ್ಳುವುದು.

- ಅಭ್ಯರ್ಥಿಯು ಅರ್ಜಿ ಶುಲ್ಕ ಪಾವತಿಸಿ, Submit ಮಾಡುವ ಮೊದಲು ಮಾತ್ರ ತನ್ನ ಅರ್ಜಿಯಲ್ಲಿನ ಮಾಹಿತಿಗಳನ್ನು ತಿದ್ದುಪಡಿ ಮಾಡಬಹುದು, ಆದ್ದರಿಂದ ಅಭ್ಯರ್ಥಿಯು ಶುಲ್ಕ ಪಾವತಿಸಿ, Submit ಮಾಡುವ ಮೊದಲು ಅರ್ಜಿಯಲ್ಲಿನ ಮಾಹಿತಿಗಳನ್ನು ಜಾಗರೂಕತೆಯಿಂದ ಓದಿ ಭರ್ತಿಮಾಡಿ, ಸರಿಯಾಗಿ ನಮೂದಿಸಿರುವುದನ್ನು ಖಚಿತಪಡಿಸಿಕೊಂಡು Submit ಮಾಡುವುದು.

- ಅಭ್ಯರ್ಥಿಯು ಅರ್ಜಿ ಶುಲ್ಕ ಪಾವತಿಸಿ, ಅರ್ಜಿಯನ್ನು ಒಮ್ಮೆ Submit ಮಾಡಿದ ಮೇಲೆ ಯಾವುದೇ ಮಾಹಿತಿಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ. ಈ ಸಂಬಂಧ ಅಭ್ಯರ್ಥಿಗಳಿಂದ ಯಾವುದೇ ಮನವಿಗಳನ್ನು ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಸ್ವೀಕರಿಸಲಾಗುವುದಿಲ್ಲ.

- **"ONLINE" ಮೂಲಕ ಅಂದರೆ INTERNET BANKING /CREDIT CARD /DEBIT CARD/UPI ಅಥವಾ ಬ್ಯಾಂಕ್ ಚಲನ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿನಲ್ಲಿ ಮಾತ್ರ ಚಲನ್ ಮೂಲಕ ಶುಲ್ಕ ಪಾವತಿಸುವುದು) ಮೂಲಕವೇ ಪಾವತಿಸತಕ್ಕದ್ದು. ಇನ್ಯಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. INTERNET Crash ಅನ್ನು ತಪ್ಪಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆವಿಗೂ ಕಾಯದೇ ಮುಂಚಿತವಾಗಿ ಅರ್ಜಿ ಸಲ್ಲಿಸುವುದು.**

- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಶುಲ್ಕ ಪಾವತಿಸಿದ ನಂತರ,(ಚಲನ್ ಮೂಲಕ ಪಾವತಿಸಿದಲ್ಲಿ, ಚಲನ್ ನಂಬರ್ ಅನ್ನು ನೀಡಿದ ಅಂಕಣದಲ್ಲಿ ನಮೂದಿಸುವುದು) ಅಭ್ಯರ್ಥಿಯು ತನ್ನ ಆನ್‌ಲೈನ್ ಅರ್ಜಿಯನ್ನು **User name** ಮತ್ತು **Password** ಅನ್ನು ನಮೂದಿಸಿ, ಡೌನ್ ಲೋಡ್ ಮಾಡಿಕೊಳ್ಳುವುದು.

- **ಚಲನ್ ಮೂಲಕ** ಅರ್ಜಿ ಶುಲ್ಕ **ಪಾವತಿಸಿದಲ್ಲಿ, ಚಲನ್ ನಂಬರ್ ಅನ್ನು 24 ಗಂಟೆಗಳ ನಂತರ ಅಂದರೆ ಮರುದಿನ ನೀಡಿದ ಅಂಕಣದಲ್ಲಿ ನಮೂದಿಸುವುದರ ಮೂಲಕ** ಅರ್ಜಿಯ **Printout** ತೆಗೆದುಕೊಳ್ಳುವುದು.

**ಷರತ್ತುಗಳು:**

2021–22ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆ ಹಾಗೂ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ ಈ ಕೆಳಗಿನ ಷರತ್ತುಗಳನ್ವಯ ಬದಲಾವಣೆಗಳಿಗೆ ಒಳಪಡುತ್ತವೆ.

1. ನ್ಯಾಯಾಲಯದ ತೀರ್ಪು ಮತ್ತು ಆದೇಶಗಳು.
2. ಎನ್.ಸಿ.ಟಿ.ಇ. ಮಾರ್ಗಸೂಚಿ.
3. ಉನ್ನತ ಶಿಕ್ಷಣ ಸಚಿವಾಲಯದ ಸುತ್ತೋಲೆ ಹಾಗೂ ಆದೇಶಗಳು.
4. ಕರ್ನಾಟಕ ರಾಜ್ಯದ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನಿರ್ಣಯಗಳು ಮತ್ತು ಆದೇಶಗಳು.
5. ಇತರೆ ಯಾವುದೇ ಸಂವಿಧಾನ ಬದ್ಧ ಆದೇಶಗಳು.

**ಅರ್ಹತೆಗಳು:**

1. ಸರ್ಕಾರಿ ಕೋಟಾದ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.

2. 10+2+3/4 (ಎಸ್.ಎಸ್.ಎಲ್.ಸಿ + 2 ವರ್ಷದ ಪಿ.ಯು.ಸಿ + 3 ಅಥವಾ 4 ವರ್ಷದ ಪದವಿ) ಕ್ರಮದ ವಿದ್ಯಾರ್ಹತೆಯನ್ನು ಹೊಂದಿರಬೇಕು.

"**ಕರ್ನಾಟಕದ ಅಭ್ಯರ್ಥಿ ಎಂದರೆ**"

(ಅ) ಸರ್ಕಾರಿ ಶಿಕ್ಷಣ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಠ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು. **ಹಾಗೂ**

(ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ **ಅಥವಾ** ದ್ವಿತೀಯ ಪಿ.ಯು.ಸಿ./ 12ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

(ಇ) ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು **ಕರ್ನಾಟಕದಲ್ಲಿ ಕನಿಷ್ಠ 7 ವರ್ಷಗಳು ವಾಸ ಮಾಡಿದ** ಬಗ್ಗೆ **ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.**

(ಈ)ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ/ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ"**ಖಾಸಗಿ ಅಭ್ಯರ್ಥಿ**" ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲಿ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

- ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿ ಮಾಡಲಾಗಿದೆ ಎಂದಾಕ್ಷಣ ಅರ್ಜಿಯು ಪರಿಪೂರ್ಣವಾಗಿ ಸಲ್ಲಿಕೆವಾಗಿರುವುದಿಲ್ಲ. ಆನ್‌ಲೈನ್ ಅರ್ಜಿಯ **Printout** ಬಂದರೆ ಮಾತ್ರ ಅರ್ಜಿಯು ಪರಿಪೂರ್ಣವಾಗಿ ಸಲ್ಲಿಕೆಯಾಗಿದೆ ಎಂದರ್ಥ. ಅಭ್ಯರ್ಥಿಯು ಶುಲ್ಕ ಪಾವತಿಸಿದ ನಂತರ ಆನ್‌ಲೈನ್ ಅರ್ಜಿಯನ್ನು **Printout** ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅರ್ಜಿಯನ್ನು ದಾಖಲಾತಿ ಸಂದರ್ಭದಲ್ಲಿ ಪರಿಶೀಲನೆಗೆ ಹಾಗೂ ಕಛೇರಿ ಸಂಬಂಧಿತ ಆಡಳಿತ ಸಂಪರ್ಕಕ್ಕಾಗಿ ಒದಗಿಸಬೇಕಿರುತ್ತದೆ.

- ಮುದ್ರಿತ ಅರ್ಜಿಯು ಒಂದು ವೇಳೆ ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ User ID and Password ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ.

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಮೂಲಕ ನೀಡಿರುವ ಮಾಹಿತಿಗಳನ್ನು ಪ್ರತಿ ಹಂತದಲ್ಲಿಯೂ ಕಡ್ಡಾಯವಾಗಿ Submit ಮಾಡುವುದು. ಪ್ರತಿ ಹಂತದಲ್ಲೂ ಅಗತ್ಯವಿರುವ ಅಧಿಕೃತ ಮಾಹಿತಿಯ ದಾಖಲೆಗಳನ್ನು ಎಚ್ಚರಿಕೆಯಿಂದ ಮೊದಲೇ ಸಿದ್ಧಪಡಿಸಿಟ್ಟುಕೊಂಡು, ಸರಿಯಾದ ಮಾಹಿತಿ ಭರ್ತಿ ಮಾಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಆನ್‌ಲೈನ್ ಅರ್ಜಿಗಳನ್ನು ಪೂರ್ಣಗೊಳಿಸಿ Submit ಮಾಡುವುದು. ಅಭ್ಯರ್ಥಿಯು ಅಂತಿಮವಾಗಿ Submit ಮಾಡಿದ ನಂತರ ಅರ್ಜಿಯಲ್ಲಿ ಭರ್ತಿ ಮಾಡಿದ ಯಾವುದೇ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

  **ಸೂಚನೆ:** ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿಶುಲ್ಕ ಪಾವತಿಸುವ ಸಂದರ್ಭದಲ್ಲಿ ಅರ್ಜಿಶುಲ್ಕವು ಅಭ್ಯರ್ಥಿಯ ಉಳಿತಾಯ ಖಾತೆಯಲ್ಲಿ **DEBIT** ಆಗಿ ಕೇಂದ್ರೀಕೃತ ದಾಖಲಾತಿ ಘಟಕದ ಬ್ಯಾಂಕ್ ಖಾತೆಗೆ ಜಮೆ ಆಗದೆ **Transaction Failure** ಆದಾಗ ಅರ್ಜಿಯ **Printout** ಬರುವುದಿಲ್ಲ ಇದಕ್ಕೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

- ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿದ ಎರಡು ದಿನಗಳ ನಂತರವೂ **Payment Status Pending** ಎಂದಿದ್ದಲ್ಲಿ ಅಥವಾ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಈ ಕೆಳಕಂಡ ಸ್ಥಿರ ದೂರವಾಣಿ ಸಂಖ್ಯೆಗಳ ಮೂಲಕ ಮಾತ್ರ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. **ಯಾವುದೇ ಕಾರಣಕ್ಕೂ ಹಿರಿಯ ಅಧಿಕಾರಿಗಳ ಮೊಬೈಲ್ ಸಂಖ್ಯೆಗಳಿಗೆ ಈ ಸಂಬಂಧ ಕರೆ ಮಾಡಬಾರದು ಹಾಗೂ ಅಂತಹ ಕರೆಗಳನ್ನು ಸ್ವೀಕರಿಸಲಾಗುವುದಿಲ್ಲ. ದೂರವಾಣಿ ಸಂಖ್ಯೆಗಳು: 080–22483140, 080–22483145 ಮತ್ತು 080–22228805.**

- **"ONLINE" ಅರ್ಜಿಗಳನ್ನು ಭರ್ತಿ ಮಾಡುವಾಗ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ, ದ್ವಂದ್ವ ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಇಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಪಾವತಿಸಬೇಕಾದ ಶುಲ್ಕ**

| ಕ್ರ.ಸಂ | ವಿವರ | ಶುಲ್ಕ |
|---|---|---|
| 1 | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಪ್ರವರ್ಗ-1 | **ರೂ. 100-00** |
| 2 | ಅಂಗವಿಕಲ ಅಭ್ಯರ್ಥಿಗಳಿಗೆ | **ಶುಲ್ಕ ವಿನಾಯಿತಿ ನೀಡಿದೆ.** |
| 3 | ಇತರೆ ಅಭ್ಯರ್ಥಿಗಳು | **ರೂ. 300-00** |

ಬಿ.ಇಡಿ ಕೋರ್ಸಿಗೆ ದಾಖಲಾಗುವ ಸರ್ಕಾರಿ ಕೋಟಾದ ಅಭ್ಯರ್ಥಿಗಳಿಗೆ ಅನ್ವಯಿಸುವ ನಿಯಮ ಹಾಗೂ ಅರ್ಹತೆಗಳು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ದಾಖಲಾಗುವ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

**ವಿದ್ಯಾರ್ಹತೆ:**

**2.ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.**

(ಎ) ಕನಿಷ್ಠ ಶೇ.50 ಅಂಕಗಳೊಂದಿಗೆ ಪದವಿ **ಅಥವಾ** ಶೇ.50 ಅಂಕಗಳೊಂದಿಗೆ ವಿಜ್ಞಾನ/ಸಾಮಾಜಿಕ ವಿಜ್ಞಾನಗಳು/ಮಾನವಿಕ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳು. ಕನಿಷ್ಠ ಶೇ.55ರಷ್ಟು ಅಂಕಗಳೊಂದಿಗೆ ಇಂಜಿನಿಯರಿಂಗ್ ನಲ್ಲಿ ಪದವಿ/ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವ ತಂತ್ರಜ್ಞಾನ ಅಥವಾ ಇನ್ಯಾವುದೇ ತತ್ಸಮಾನ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು.

[Candidates with at least fifty (50%) percent marks either in the Bachelor's Degree and/or in the Master's Degree in Sciences/Social Sciences/Humanity, Bachelor's in Engineering or Technology with specialization in Science and Mathematics with 55% marks or any other qualification equivalent thereto, are eligible for admission to the programme.]

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ ವಿಕಲಚೇತನ (PWD) ಅಭ್ಯರ್ಥಿಗಳಿಗೆ (ಈ ಮೇಲೆ ತಿಳಿಸಲಾದ ಕನಿಷ್ಠ ಶೇಕಡವಾರು ಅರ್ಹತಾ ಅಂಕಗಳಲ್ಲಿ) ನಿಯಮಾನುಸಾರ ಶೇ.5ರಷ್ಟು ಅಂಕ ವಿನಾಯಿತಿ ಇರುತ್ತದೆ.**

**(ಬಿ)** ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ **(Subsidiary Subjects)** ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ, (ಈ ಬಗ್ಗೆ ಅಂಕಪಟ್ಟಿಯ Footnote ನಲ್ಲಿ ನಮೂದಿಸಿದ್ದಲ್ಲಿ ಮಾತ್ರ)ಆ ಅಂಕಗಳನ್ನು ಸೇರಿಸಿ ಅರ್ಜಿಯಲ್ಲಿ ಭರ್ತಿ ಮಾಡುವುದು. ಪದವಿಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿ ಗಳಲ್ಲಿ ನಮೂದಿಸಲಾದ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಪರಿಗಣಿಸಲಾಗುವುದು.

3. ಸರ್ಕಾರಿ/ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು **ಸೇವಾ ಪ್ರಮಾಣ ಪತ್ರ** ಮತ್ತು ಅಭ್ಯಾಸ ಮಾಡಲು ಸಕ್ಷಮ ಅಧಿಕಾರಿಗಳಿಂದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಮತ್ತು **ಸರ್ಕಾರದಿಂದ ಪಡೆದ ಅನುಮತಿ ಪತ್ರ**ಗಳನ್ನು, ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಉದ್ಯೋಗದಾತರಿಂದ ಪಡೆದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ದಾಖಲಾತಿ ಸಮಯದಲ್ಲಿ ಸಲ್ಲಿಸುವುದು. ಸೇವೆಯಲ್ಲಿರುವ ಶಿಕ್ಷಕರಿಗೆ ಯಾವುದೇ ಮೀಸಲಾತಿ/ ವಿನಾಯತಿ ಇರುವುದಿಲ್ಲ.

4. 2021-22ನೇ ಸಾಲಿನ ಬಿ.ಇಡಿ ದಾಖಲಾತಿ ಅಧಿಸೂಚನೆ ಹೊರಡಿಸಿದ ದಿನಾಂಕದ ಪೂರ್ವದಲ್ಲಿ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:**

(ಅ) **ರಕ್ಷಣಾ ದಳದವರು** :

**1)** ದಿನಾಂಕ: 01-07-2020 ರಿಂದ 30-06-2021ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ಉತ್ತೀರ್ಣರಾಗಿರಬೇಕು.

**ಅಥವಾ**

**2)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗ್ಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

**ಅಥವಾ**

**3)** ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು ಇಂತಹ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ "Broucher" ನ ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-02**ರಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ **ಸೈನಿಕ ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

**ಸೂಚನೆ:** (ಅ) ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲಾಗುವುದು.

(ಆ) **ಮಾಜಿ ಸೈನಿಕರು:**

1. ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂಸೇನೆ, ವಾಯುಸೇನೆ ಹಾಗೂ ನೌಕಾ ಸೇನೆಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸುತ್ತಿದ್ದು ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ ಮತ್ತು ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು.

**ಅಥವಾ**

2. ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

3. ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

4. ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ತಿಳಿಸಿದ ಸಿಬ್ಬಂದಿ.

ಅ) ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ.

ಆ) ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರರು.

ಇ)ಡಿಫೆನ್ಸ್ ಸೆಕ್ಯೂರಿಟಿ ಕಾರ್ಫ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ, ಶೌರ್ಯ ಪ್ರಶಸ್ತಿ (ಗ್ಯಾಲಂಟ್ರಿ ಅವಾರ್ಡ್ಸ್) ವಿಜೇತರು, ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ, ದಿನಾಂಕ: 01-07-87ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

**ಸೂಚನೆ:-**

1. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳು ಅಥವಾ ರಾಜ್ಯ ಸರ್ಕಾರ ನಡೆಸುತ್ತಿರುವ ವಿದ್ಯಾ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯನ್ನು ಇಂತಹ ಅಭ್ಯರ್ಥಿಯು ಉತ್ತೀರ್ಣರಾಗಿರಬೇಕು.

2. ಮಾಜಿ ಸೈನಿಕರು ಅಥವಾ ಅವರ ಪತಿ/ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು "Broucher" ನ ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-03ರ** ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಪಡೆದ **ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

(ಇ) **ಗಡಿನಾಡು ಕನ್ನಡಿಗರು**: ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಪ್ರದೇಶದಲ್ಲಿದ್ದು, ಕನ್ನಡ ಮಾತನಾಡುವ ಕನ್ನಡ/ಕೊಡವ/ತುಳು ಮಾತೃಭಾಷೆಯಾಗಿರುವ ಅಭ್ಯರ್ಥಿಗಳು. ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಢಿಂಗ್ಲಾಜ್ ತಾಲ್ಲೂಕುಗಳು **ಅಥವಾ** ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವವರು. ಈ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು**.

1. ಮಾತೃಭಾಷೆ ಕನ್ನಡ, ಕೊಡವ, ತುಳು ಆಗಿರುವ ಬಗ್ಗೆ ವ್ಯಾಸಂಗ ಮಾಡಿದ ಸಂಸ್ಥೆಯ/ಶಾಲೆಯ ಮುಖ್ಯಸ್ಥರಿಂದ **ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ** ಪಡೆದಿರಬೇಕು. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಾದ ಉಪನಿರ್ದೇಶಕರಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (**ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)

2. ಅಭ್ಯರ್ಥಿಯು ಕನ್ನಡ ಮಾತನಾಡುವ ವಿವಾದಗ್ರಸ್ಥ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ **ವಾಸಸ್ಥಳದ ಪ್ರಮಾಣ ಪತ್ರ** ಪಡೆದಿರಬೇಕು.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಗಡಿನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಓಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಈ) **ಹೊರನಾಡು ಕನ್ನಡಿಗರು**: ಹೊರನಾಡು ಕನ್ನಡಿಗರು ಎಂದರೆ, ಅಭ್ಯರ್ಥಿಯು ದಾಖಲಾತಿ ಬಯಸುವ ವರ್ಷದ ಜುಲೈ 1ಕ್ಕೆ ಕನಿಷ್ಟ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರಬೇಕು ಮತ್ತು ಅವರ ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರಬೇಕು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯ/ ಪರೀಕ್ಷಾ ಮಂಡಳಿ/ ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಒದಗಿಸಬೇಕು.**

1. ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ಅಭ್ಯರ್ಥಿಯು ವ್ಯಾಸಂಗ ಮಾಡಿದ ಸಂಸ್ಥೆಯ/ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲೆಯ ಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. ("Broucher"ನ ಕೊನೆಯಲ್ಲಿ ನಿಗದಿತ **ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ದಿನಾಂಕ 01-07-2021ಕ್ಕೆ ಅಭ್ಯರ್ಥಿಯು ಕನಿಷ್ಟ ಐದು ವರ್ಷಗಳ ಕಾಲ ಎಂದರೆ ಜುಲೈ 2016 ರಿಂದ ಇಲ್ಲಿಯವರೆಗೆ ಹೊರ ರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.

ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಓಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

**(ಉ) ಎನ್.ಸಿ.ಸಿ. ಕೆಡೆಟ್ಸ್:**

**(i)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

**ಅಥವಾ**

**(ii)** ಎನ್.ಸಿ.ಸಿ ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)

(ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)

(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ

(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್ ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ)ಯನ್ನು ಪೂರ್ಣಗೊಳಿಸಿರಬೇಕು.

**(iii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಈ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ "ಬಿ" ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ

(ಆ) ಚಾರಣ ಶಿಬಿರ

(ಇ) ಪರ್ವತಾರೋಹಣ ಕೋರ್ಸು

(ಈ) ಮೂಲ ನಾಯಕತ್ವ ಶಿಬಿರ

(ಉ) ಉನ್ನತ ನಾಯಕತ್ವ ಶಿಬಿರ

(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್

(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

**(iv)** ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು.

1. ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
2. ಅನುಚ್ಛೇದ 1 ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
3. ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
4. ಕರ್ನಾಟಕದಿಂದ ಅನುಚ್ಛೇದ (ii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
5. ಕರ್ನಾಟಕದಿಂದ ಅನುಚ್ಛೇದ (iii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

6. ಅನುಚ್ಛೇದ (v)ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iv) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ.'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
7. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು.

ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆ ಮಾಡಿಕೊಳ್ಳಬಹುದು.

**(ಊ) ಎನ್.ಎಸ್.ಎಸ್. ಸ್ವಯಂ ಸೇವಕರು:** ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಠ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಠ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

**(ಋ) ಕ್ರೀಡಾಪಟುಗಳು:** ತರಗತಿ 8 ರಿಂದ ಅಂತಿಮ ಪದವಿವರೆಗಿನ ವ್ಯಾಸಂಗದ ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

**ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು :** 1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ 2. ವಿಶ್ವವಿದ್ಯಾಲಯ 3. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ. ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು.

**ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು (ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ) ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು. ಇವರು ಹಕ್ಕು ಹೊಂದಿರುತ್ತಾರೆ.**

## ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲಾತಿ

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇಕಡಾ 1 ರಷ್ಟು ಸೀಟುಗಳನ್ನು ಪ್ರಚಲಿತ ನಿಯಮದನ್ವಯ ತುಂಬಲಾಗುವುದು.

| | | |
|---|---|---|
| 1 | ರಕ್ಷಣಾದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.13 % |
| 2 | ಮಾಜಿ ಸೈನಿಕ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.15 % |
| 3 | ಗಡಿನಾಡು ಕನ್ನಡಿಗ | 0.10 % |
| 4 | ಹೊರನಾಡು ಕನ್ನಡಿಗ | 0.10 % |
| 5 | ಎನ್.ಸಿ.ಸಿ. ಕೆಡೆಟ್ಸ್ | 0.15 % |
| 6 | ಎನ್.ಎಸ್.ಎಸ್. ಸ್ವಯಂ ಸೇವಕರು | 0.13 % |
| 7 | ಕ್ರೀಡಾಪಟುಗಳು | 0.24 % |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಶೇಕಡ 50 ರಷ್ಟು ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹಾಗೂ ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

ಆದರೆ ವಿಜ್ಞಾನ ವಿಭಾಗದ ಒಟ್ಟು ಸೀಟುಗಳ ಪೈಕಿ ಶೇಕಡಾ 60 ರಷ್ಟು ಸೀಟುಗಳನ್ನು ಪಿ.ಸಿ.ಎಂ. ಗುಂಪಿನಿಂದಲೂ ಹಾಗೂ ಶೇಕಡ 40 ರಷ್ಟು ಸೀಟುಗಳನ್ನು ಸಿ.ಬಿ.ಝಡ್ ಗುಂಪಿನಿಂದಲೂ ಆಯ್ಕೆ ಮಾಡಲಾಗುವುದು. ಯಾವುದೇ ಒಂದು ಗುಂಪಿನಲ್ಲಿ ಅಂದರೆ ಪಿ.ಸಿ.ಎಂ. ಅಥವಾ ಸಿ.ಬಿ.ಝಡ್ ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದ ಪಕ್ಷದಲ್ಲಿ ಅಂತಹ ಸೀಟುಗಳನ್ನು ಅದೇ ವಿಭಾಗದ ಮತ್ತೊಂದು ಗುಂಪಿನಿಂದ ಆಯ್ಕೆ ಮಾಡಲಾಗುವುದು.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

# Different Categories Reservation Policy

## ವಿವಿಧ ಪ್ರವರ್ಗಗಳಿಗೆ ಮೀಸಲಾತಿ:

ವಿವಿಧ ಪ್ರವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ಮೀಸಲಾತಿಯಲ್ಲಿ ಬದಲಾವಣೆಯಾಗಬಹುದು.

| | | |
|---|---|---|
| 1 | ಸಾಮಾನ್ಯ ವರ್ಗ | 50% |
| 2 | ಪರಿಶಿಷ್ಟ ಜಾತಿ | 15% |
| 3 | ಪರಿಶಿಷ್ಟ ಪಂಗಡ | 03% |
| 4 | ಪ್ರವರ್ಗ–1 | 04% |
| 5 | ಪ್ರವರ್ಗ–2ಎ | 15% |
| 6 | ಪ್ರವರ್ಗ–2ಬಿ | 04% |
| 7 | ಪ್ರವರ್ಗ–3ಎ | 04% |
| 8 | ಪ್ರವರ್ಗ–3ಬಿ | 05% |

| | | |
|---|---|---|
| 1 | General | 50% |
| 2 | Scheduled Caste | 15% |
| 3 | Scheduled Tribe | 03% |
| 4 | Category - I | 04% |
| 5 | Category - 2A | 15% |
| 6 | Category - 2B | 04% |
| 7 | Category - 3A | 04% |
| 8 | Category - 3B | 05% |

ಮೇಲ್ಕಂಡ ಮೀಸಲಾತಿ ಅನ್ವಯ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮೀಸಲಾತಿಯನ್ನು ಲಭ್ಯವಿರುವ ಮಿತಿಗೆ ಸೀಮಿತಗೊಳಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ತುಂಬಲಾಗುವುದು.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

**ಒಳ ಮೀಸಲಾತಿಗಳು:**

| | | |
|---|---|---|
| ಕನ್ನಡ ಮಾಧ್ಯಮದ ಮೀಸಲಾತಿ | ಶೇ. 05 | 1 ರಿಂದ 10 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ |
| ಮಹಿಳಾ ಮೀಸಲಾತಿ | ಶೇ. 30 | ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು. |
| ಅಂಗವಿಕಲ ಅಭ್ಯರ್ಥಿಗಳಿಗೆ | ಶೇ. 03 | ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2007 ದಿನಾಂಕ: 26–07–2011 ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೆ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸರ್ಕಾರಿ ಕೋಟಾ ಸೀಟುಗಳ ಗರಿಷ್ಠ ಶೇಕಡಾ 3 ರಷ್ಟು ಸೀಟುಗಳನ್ನು ಮೀಸಲಾಗಿಡಲಾಗುತ್ತದೆ. |

ಅಂಗವಿಕಲ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು (**ಅನುಬಂಧ–10**ರಲ್ಲಿ ನೀಡಿರುವ ನಮೂನೆಯಲ್ಲಿ) ಕಡ್ಡಾಯವಾಗಿ ಸಲ್ಲಿಸಬೇಕು. ಹಾಗೂ ಶೇ.40ಕ್ಕೂ ಹೆಚ್ಚು ಪ್ರಮಾಣದ ಅಂಗವೈಕಲ್ಯವನ್ನು ಹೊಂದಿರುವ ಅಭ್ಯರ್ಥಿಗಳನ್ನು ಅಂಗವಿಕಲ ಮೀಸಲಾತಿಗೆ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಅಂಗವಿಕಲ ಅಭ್ಯರ್ಥಿಗಳನ್ನು ಮಾತ್ರ ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು. ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸದಿರುವ ಅಂಗವಿಕಲ ಅಭ್ಯರ್ಥಿಗಳನ್ನು ಅಂಗವಿಕಲ ಮೀಸಲಾತಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಶ್ರವಣ ದೋಷದ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯೊಂದಿಗೆ ನಿಮ್ಹಾನ್ಸ್ ಆಸ್ಪತ್ರೆ (**NIMHANS HOSPITAL**) ಹೊಸೂರು ರಸ್ತೆ, ಬೆಂಗಳೂರು ಅಥವಾ ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಜಯನಗರ ಈಸ್ಟ್, ಭೈರಸಂದ್ರ, ಬೆಂಗಳೂರು ಇಲ್ಲಿ ಆಡಿಯೋಗ್ರಾಂ ಪರೀಕ್ಷೆಗೆ ಒಳಪಟ್ಟು, ಅವರು ನೀಡುವ ವರದಿಯನ್ನು ಜಿಲ್ಲಾ ವೈದ್ಯಕೀಯ ಮಂಡಳಿಯ ಮುಂದೆ ಹಾಜರುಪಡಿಸಿ, ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು (**ಅನುಬಂಧ–10** ರಲ್ಲಿ ನೀಡಿರುವ ನಮೂನೆಯಲ್ಲಿ) ದಾಖಲಾತಿ ಸಮಯದಲ್ಲಿ ಇತರ ಮೂಲ ದಾಖಲೆಗಳೊಂದಿಗೆ ಸಲ್ಲಿಸಬೇಕು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist

Reservation policy document 2022-23 1/11

221 (3)

PRINCIPAL
J.S.S. Institute of Education
P.B. 26, SAKALESHPUR
Hassan Dist.

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

ಕೇಂದ್ರೀಕೃತ ದಾಖಲಾತಿ ಘಟಕ, ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-09

ದೂರವಾಣಿ-22228805, 22483140, 22483145 email :cackarnataka1@gmail.com

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./01/2022-23 ದಿನಾಂಕ:10-11-2022

## ಅಧಿಸೂಚನೆ

ವಿಷಯ: 2022-23 ನೇ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸ್‌ಗೆ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಮತ್ತು ಹಂಚಿಕೆ.

ಉಲ್ಲೇಖ:1. ಸರ್ಕಾರಿ ಆದೇಶ ಸಂಖ್ಯೆ. ಇಡಿ 10 ಯುಬಿಸಿ 99, ಬೆಂಗಳೂರು, ದಿನಾಂಕ: 3.6.1999.
2. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1252).
3. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1253)
4. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1255)
5. ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2013, ಬೆಂಗಳೂರು, ದಿನಾಂಕ: 12-11-2013.
6. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 20-11-2015
7. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿನಾಂಕ: 04-12-2015.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬೆಂಗಳೂರುರವರ ಪತ್ರ ಸಂ:ಇಡಿ 298 ಯುಆರ್‌ಸಿ 2016ದಿ:17/10/2016.
9. ಸರ್ಕಾರದ ಪತ್ರ ಸಂಖ್ಯೆ:ಇಡಿ.35.ಯುಜಿಹೆಚ್ 2022(ಇ),ದಿನಾಂಕ:31-10-2022.
10. ಈ ಕಛೇರಿಯ ಅ.ಸ.ಪತ್ರ ಸಂಖ್ಯೆ: ಸಿಎಸಿ-05/ಬಿ.ಇಡಿ.ದಾ-01/2022-23, ದಿನಾಂಕ:30-05-2022ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಕಾಲೇಜುಗಳ ವಿವರ.

************

2022-23ನೇ ಶೈಕ್ಷಣಿಕ ಸಾಲಿಗೆ **ಎರಡು ವರ್ಷಗಳ ಬಿ.ಇಡಿ.** ಕೋರ್ಸಿನ ವ್ಯಾಸಂಗಕ್ಕಾಗಿ ದಾಖಲಾತಿ ಸಂಬಂಧ ಉಲ್ಲೇಖ (10) ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಉಲ್ಲೇಖ-1ರಂತೆ ಕರೆಯಲಾಗಿದೆ.

ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ https://schooleducation.kar.nic.in ನಲ್ಲಿ "ONLINE APPLICATION FOR ADMISSION TO TWO YEAR B.Ed. COURSE FOR THE YEAR 2022-23" ಎಂಬುದನ್ನು ಕ್ಲಿಕ್ ಮಾಡಿ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಈ ಅರ್ಜಿ ನಮೂನೆಯನ್ನು ಭರ್ತಿ ಮಾಡುವ ಮುನ್ನ ವೆಬ್‌ಸೈಟ್‌ನಲ್ಲಿರುವ "Instructions to the candidates" ಶೀರ್ಷಿಕೆಯಡಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಓದಿ ಅರ್ಥೈಸಿಕೊಂಡು ಜಾಗರೂಕತೆಯಿಂದ ಅರ್ಜಿಯನ್ನು ಭರ್ತಿ ಮಾಡುವುದು. **ಅಭ್ಯರ್ಥಿಗಳು "ONLINE" ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡತಕ್ಕದ್ದು, ಅಂತೆಯೇ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಭರ್ತಿ ಮಾಡುವುದು. "ONLINE" ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.**

**ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ**

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಮೊದಲು ಇಲಾಖಾ ವೆಬ್‌ಸೈಟ್ http://schooleducation.kar.nic.in ನಲ್ಲಿ ನೀಡಲಾದ ಅಭ್ಯರ್ಥಿಗಳಿಗೆ ಸೂಚನೆಗಳನ್ನು ಓದಿ ಅರ್ಥೈಸಿಕೊಳ್ಳುವುದು.

- **"ONLINE" ಅರ್ಜಿಗಳನ್ನು ದಿನಾಂಕ: 10-11-2022 ರಿಂದ 30-11-2022 ರ ರಾತ್ರಿ 12.00ರ ಒಳಗಾಗಿ ಸಲ್ಲಿಸುವುದು.**

- Registration ಮತ್ತು Login ನೊಂದಿಗೆ ಆನ್‌ಲೈನ್ ಅರ್ಜಿಯನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡುವುದು.

- ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಭಾವಚಿತ್ರ (50 KB ಕ್ಕಿಂತಲೂ ಕಡಿಮೆ) ಹಾಗೂ ಸಹಿಯನ್ನು (50 KB ಕ್ಕಿಂತಲೂ ಕಡಿಮೆ) ಅಪ್‌ಲೋಡ್ ಮಾಡುವುದು.

- **ಅಭ್ಯರ್ಥಿಗಳು ತಮ್ಮ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಹಾಜರಾಗಲು ಬಯಸುವ ಜಿಲ್ಲಾ ನೋಡೆಲ್ ಕೇಂದ್ರ/ ವ್ಯವಸ್ಥಾಪಕ ಕೇಂದ್ರ (CTE/DIET) ಗಳನ್ನು ಅನುಬಂಧ-04ರಲ್ಲಿ ನೀಡಲಾಗಿದೆ. ಅದರಂತೆ, ಅಭ್ಯರ್ಥಿಗಳು ಬಯಸುವ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳನ್ನು ಅರ್ಜಿಯಲ್ಲಿ ಆಯ್ಕೆಮಾಡಿಕೊಳ್ಳುವುದು.**

- ಅಭ್ಯರ್ಥಿಯು ಅರ್ಜಿ ಶುಲ್ಕ ಪಾವತಿಸಿ, Submit ಮಾಡುವ ಮೊದಲು ತನ್ನ ಅರ್ಜಿಯಲ್ಲಿನ ಮಾಹಿತಿಗಳನ್ನು ಮಾತ್ರ ತಿದ್ದುಪಡಿ ಮಾಡಬಹುದು, Submit ಮಾಡಿದ ನಂತರ ತಿದ್ದುಪಡಿಗಳಿಗೆ ಅವಕಾಶವಿಲ್ಲವಾದ್ದರಿಂದ ಅಭ್ಯರ್ಥಿಯು ಶುಲ್ಕ ಪಾವತಿಸಿ, Submit ಮಾಡುವ ಮೊದಲು ಅರ್ಜಿಯಲ್ಲಿನ ಮಾಹಿತಿಗಳನ್ನು ಜಾಗರೂಕತೆಯಿಂದ ಓದಿ ಭರ್ತಿಮಾಡಿ, ಸರಿಯಾಗಿ ನಮೂದಿಸಿರುವುದನ್ನು ಖಚಿತಪಡಿಸಿಕೊಂಡು Submit ಮಾಡುವುದು.

- ಅಭ್ಯರ್ಥಿಯು ಅರ್ಜಿ ಶುಲ್ಕ ಪಾವತಿಸಿ, ಅರ್ಜಿಯನ್ನು ಒಮ್ಮೆ Submit ಮಾಡಿದ ಮೇಲೆ ಯಾವುದೇ ಮಾಹಿತಿಗಳನ್ನು ಭರ್ತಿ ಮಾಡಲು ಅವಕಾಶವಿರುವುದಿಲ್ಲ. ಈ ಸಂಬಂಧ ಅಭ್ಯರ್ಥಿಗಳಿಂದ ಯಾವುದೇ ಮನವಿಗಳನ್ನು ಕೇಂದ್ರೀಕೃತ ದಾಖಲಾತಿ ಘಟಕದಲ್ಲಿ ಸ್ವೀಕರಿಸಲಾಗುವುದಿಲ್ಲ.

- **"ONLINE" ಮೂಲಕ ಅಂದರೆ INTERNET BANKING/CREDIT CARD /DEBIT CARD/UPI ಅಥವಾ ಬ್ಯಾಂಕ್ ಚಲನ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕಿನಲ್ಲಿ ಮಾತ್ರ ಚಲನ್ ಮೂಲಕ ಶುಲ್ಕ ಪಾವತಿಸುವುದು) ಮೂಲಕವೇ ಪಾವತಿಸತಕ್ಕದ್ದು. ಇನ್ಯಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ. INTERNET Crash ಅನ್ನು ತಪ್ಪಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆವಿಗೂ ಕಾಯದೇ ಮುಂಚಿತವಾಗಿ ಅರ್ಜಿ ಸಲ್ಲಿಸುವುದು. ಒಂದು ವೇಳೆ ಆನ್‌ಲೈನ್ ನಲ್ಲಿ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಅಭ್ಯರ್ಥಿಯ ಬ್ಯಾಂಕ್ ಖಾತೆಯಿಂದ ಹಣ ಕಡಿತವಣೆಯಾಗಿ, ಕೇಂದ್ರೀಕೃತ ದಾಖಲಾತಿ ಘಟಕದ ಖಾತೆಗೆ ಹಣ ಪಾವತಿಯಾಗದಿದ್ದಲ್ಲಿ, ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ. ಹಾಗೂ ಅಭ್ಯರ್ಥಿಯ ಆನ್‌ಲೈನ್ ಅರ್ಜಿಯ ಮುದ್ರಿತವಾಗುವುದಿಲ್ಲ.**

- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಶುಲ್ಕ ಪಾವತಿಸಿದ ನಂತರ,(ಚಲನ್ ಮೂಲಕ ಪಾವತಿಸಿದಲ್ಲಿ, ಚಲನ್ ನಂಬರ್ ಅನ್ನು ನೀಡಿದ ಅಂಕಣದಲ್ಲಿ ನಮೂದಿಸುವುದು) ಅಭ್ಯರ್ಥಿಯು ತನ್ನ ಆನ್‌ಲೈನ್ ಅರ್ಜಿಯನ್ನು User name ಮತ್ತು Password ಅನ್ನು ನಮೂದಿಸಿ, ಡೌನ್‌ಲೋಡ್ ಮಾಡಿಕೊಳ್ಳುವುದು.

- **ಚಲನ್ ಮೂಲಕ** ಅರ್ಜಿ ಶುಲ್ಕ **ಪಾವತಿಸಿದಲ್ಲಿ, ಚಲನ್ ನಂಬರ್ ಅನ್ನು 24 ಗಂಟೆಗಳ ನಂತರ ಅಂದರೆ ಮರುದಿನ ನೀಡಿದ ಅಂಕಣದಲ್ಲಿ ನಮೂದಿಸುವುದರ ಮೂಲಕ** ಅರ್ಜಿಯ Printout ತೆಗೆದುಕೊಳ್ಳುವುದು.

- ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿ ಮಾಡಲಾಗಿದೆ ಎಂದಾಕ್ಷಣ ಅರ್ಜಿಯು ಪರಿಪೂರ್ಣವಾಗಿ ಸಲ್ಲಿಕೆವಾಗಿರುವುದಿಲ್ಲ. ಆನ್‌ಲೈನ್ ಅರ್ಜಿಯ Printout ಬಂದರೆ ಮಾತ್ರ ಅರ್ಜಿಯು ಪರಿಪೂರ್ಣವಾಗಿ ಸಲ್ಲಿಕೆಯಾಗಿದೆ ಎಂದರ್ಥ. ಅಭ್ಯರ್ಥಿಯು ಶುಲ್ಕ ಪಾವತಿಸಿದ ನಂತರ ಆನ್‌ಲೈನ್ ಅರ್ಜಿಯನ್ನು Printout ತೆಗೆದುಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅರ್ಜಿಯನ್ನು ದಾಖಲಾತಿ ಸಂದರ್ಭದಲ್ಲಿ ಪರಿಶೀಲನೆಗೆ ಹಾಗೂ ಕಛೇರಿ ಸಂಬಂಧಿತ ಆಡಳಿತ ಸಂಪರ್ಕಕ್ಕಾಗಿ ಒದಗಿಸಬೇಕಿರುತ್ತದೆ.

- ಅಭ್ಯರ್ಥಿಯು ತನ್ನ ಆನ್‌ಲೈನ್ ಅರ್ಜಿಯನ್ನು User name ಮತ್ತು Password ಅನ್ನು ನಮೂದಿಸಿ, ಡೌನ್‌ಲೋಡ್ ಮಾಡಿಕೊಳ್ಳುವುದು. ಈ ರೀತಿಯಾಗಿ ಸೃಷ್ಟಿಸಿಕೊಂಡ User ID ಮತ್ತು Password ಮಾಹಿತಿಯು ಸಂಪೂರ್ಣ ಗೌಪ್ಯ ಹಾಗೂ ಅಭ್ಯರ್ಥಿಯ ಖಾಸಗಿ ಮಾಹಿತಿಯಾಗಿರುತ್ತದೆ. ಅಭ್ಯರ್ಥಿಯು ತಮ್ಮ User ID ಮತ್ತು Password ಅನ್ನು ಗೌಪ್ಯವಾಗಿಟ್ಟುಕೊಳ್ಳತಕ್ಕದ್ದು ಮತ್ತು ಆನ್‌ಲೈನ್ ಅರ್ಜಿಯ ಸಂಬಂಧ ಎಷ್ಟೇ ಭಾರಿ Login ಆದರೂ ಕಡ್ಡಾಯವಾಗಿ Logout ಆಗಬೇಕಾಗಿರುತ್ತದೆ. ಈ ಸಂಬಂಧ ಅಭ್ಯರ್ಥಿಯ ಅರ್ಜಿಗಳಲ್ಲಿ ಯಾವುದೇ ವ್ಯತ್ಯಾಸಗಳುಂಟಾದಲ್ಲಿ ಅಭ್ಯರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

- ಒಂದು ವೇಳೆ ಮುದ್ರಿತ ಅರ್ಜಿಯು ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ User ID and Password ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ.

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವಾಗ ಅರ್ಜಿಯಲ್ಲಿ ನಮೂದಿಸುವ ಮಾಹಿತಿಗಳನ್ನು ಪ್ರತಿ ಹಂತದಲ್ಲಿಯೂ ಕಡ್ಡಾಯವಾಗಿ Submit ಮಾಡುವುದು. ಪ್ರತಿ ಹಂತದಲ್ಲೂ ಅಗತ್ಯವಿರುವ ಅಧಿಕೃತ ಮಾಹಿತಿಯ ದಾಖಲೆಗಳನ್ನು ಎಚ್ಚರಿಕೆಯಿಂದ ಮೊದಲೇ ಸಿದ್ಧಪಡಿಸಿಟ್ಟುಕೊಂಡು, ಸರಿಯಾದ ಮಾಹಿತಿ ಭರ್ತಿ ಮಾಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಆನ್‌ಲೈನ್ ಅರ್ಜಿಗಳನ್ನು ಪೂರ್ಣಗೊಳಿಸಿ Submit ಮಾಡುವುದು. ಅಭ್ಯರ್ಥಿಯು ಅಂತಿಮವಾಗಿ Submit ಮಾಡಿದ ನಂತರ ಅರ್ಜಿಯಲ್ಲಿ ಭರ್ತಿ ಮಾಡಿದ ಯಾವುದೇ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

  **ಸೂಚನೆ:** ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಅರ್ಜಿಶುಲ್ಕ ಪಾವತಿಸುವ ಸಂದರ್ಭದಲ್ಲಿ ಅರ್ಜಿಶುಲ್ಕವು ಅಭ್ಯರ್ಥಿಯ ಉಳಿತಾಯ ಖಾತೆಯಲ್ಲಿ DEBIT ಆಗಿ ಕೇಂದ್ರೀಕೃತ ದಾಖಲಾತಿ ಘಟಕದ ಬ್ಯಾಂಕ್ ಖಾತೆಗೆ ಜಮೆ ಆಗದೆ Transaction Failure ಆದಾಗ ಅರ್ಜಿಯ Printout ಬರುವುದಿಲ್ಲ. ಇದಕ್ಕೆ ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ.

- ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿದ ಎರಡು ದಿನಗಳ ನಂತರವೂ Payment Status Pending ಎಂದಿದ್ದಲ್ಲಿ ಅಥವಾ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಈ ಕೆಳಕಂಡ ಸ್ಥಿರ ದೂರವಾಣಿ ಸಂಖ್ಯೆಗಳ ಮೂಲಕ ಕಛೇರಿ ಸಮಯದಲ್ಲಿ ಮಾತ್ರ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. **ದೂರವಾಣಿ ಸಂಖ್ಯೆಗಳು: 080-22483140, 080-22483145 ಮತ್ತು 080-22228805.**

- **"ONLINE" ಅರ್ಜಿಯಲ್ಲಿ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ, ದ್ವಂದ್ವ ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಪಾವತಿಸಬೇಕಾದ ಶುಲ್ಕ**

| ಕ್ರ.ಸಂ | ವಿವರ | ಶುಲ್ಕ |
|---|---|---|
| 1 | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಪ್ರವರ್ಗ-1 | ರೂ. 100-00 |
| 2 | ಅಂಗವಿಕಲ ಅಭ್ಯರ್ಥಿಗಳಿಗೆ | ಶುಲ್ಕ ವಿನಾಯಿತಿ ನೀಡಿದೆ. |
| 3 | ಇತರೆ ಅಭ್ಯರ್ಥಿಗಳು | ರೂ. 300-00 |

ಬಿ.ಇಡಿ ಕೋರ್ಸಿಗೆ ದಾಖಲಾಗುವ ಸರ್ಕಾರಿ ಕೋಟಾದ ಅಭ್ಯರ್ಥಿಗಳಿಗೆ ಅನ್ವಯಿಸುವ ನಿಯಮ ಹಾಗೂ ಅರ್ಹತೆಗಳು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ದಾಖಲಾಗುವ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

**ಷರತ್ತುಗಳು:**

2022-23ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆ ಹಾಗೂ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ ಈ ಕೆಳಗಿನ ಷರತ್ತುಗಳನ್ವಯ ಬದಲಾವಣೆಗಳಿಗೆ ಒಳಪಡುತ್ತವೆ.

1. ನ್ಯಾಯಾಲಯದ ತೀರ್ಪು ಮತ್ತು ಆದೇಶಗಳು.
2. ಎನ್.ಸಿ.ಟಿ.ಇ. ಮಾರ್ಗಸೂಚಿ.
3. ಉನ್ನತ ಶಿಕ್ಷಣ ಸಚಿವಾಲಯದ ಸುತ್ತೋಲೆ ಹಾಗೂ ಆದೇಶಗಳು.
4. ಕರ್ನಾಟಕ ರಾಜ್ಯದ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನಿರ್ಣಯಗಳು ಮತ್ತು ಆದೇಶಗಳು.
5. ಇತರೆ ಯಾವುದೇ ಸಂವಿಧಾನ ಬದ್ಧ ಆದೇಶಗಳು.

**ಅರ್ಹತೆಗಳು:**

1. ಸರ್ಕಾರಿ ಕೋಟಾದ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.

2. 10+2+3/4 (ಎಸ್.ಎಸ್.ಎಲ್.ಸಿ + 2 ವರ್ಷದ ಪಿ.ಯು.ಸಿ + 3 ಅಥವಾ 4 ವರ್ಷದ ಪದವಿ) ಕ್ರಮದ ವಿದ್ಯಾರ್ಹತೆಯನ್ನು ಹೊಂದಿರಬೇಕು.

"**ಕರ್ನಾಟಕದ ಅಭ್ಯರ್ಥಿ ಎಂದರೆ**"

(ಅ) ಸರ್ಕಾರಿ ಶಿಕ್ಷಣ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ಅರ್ಹತಾ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಕರ್ನಾಟಕದಲ್ಲಿ ಮಾಡಿರಬೇಕು. **ಹಾಗೂ**

(ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ **ಅಥವಾ** ದ್ವಿತೀಯ ಪಿ.ಯು.ಸಿ./ 12ನೇ ತರಗತಿ ಪರೀಕ್ಷೆಯನ್ನು ಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

(ಇ) ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು **ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸ ಮಾಡಿದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.**

(ಈ)ಎಸ್.ಎಸ್.ಎಲ್.ಸಿ. **ಅಥವಾ** ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ/ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ **"ಖಾಸಗಿ ಅಭ್ಯರ್ಥಿ"** ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲೀ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

<u>ವಿದ್ಯಾರ್ಹತೆ:</u>

**2.ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಈ ಕೆಳಕಂಡಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.**

(ಎ) ಕನಿಷ್ಠ ಶೇ.50 ಅಂಕಗಳೊಂದಿಗೆ ಪದವಿ **ಅಥವಾ** ಶೇ.50 ಅಂಕಗಳೊಂದಿಗೆ ವಿಜ್ಞಾನ/ಸಾಮಾಜಿಕ ವಿಜ್ಞಾನಗಳು/ಮಾನವಿಕ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಹೊಂದಿದ ಅಭ್ಯರ್ಥಿಗಳು. ಕನಿಷ್ಠ ಶೇ.55ರಷ್ಟು ಅಂಕಗಳೊಂದಿಗೆ ಇಂಜಿನಿಯರಿಂಗ್ ನಲ್ಲಿ ಪದವಿ/ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವ ತಂತ್ರಜ್ಞಾನ ಅಥವಾ ಇನ್ಯಾವುದೇ ತತ್ಸಮಾನ ವಿದ್ಯಾರ್ಹತೆ ಪಡೆದಿರುವ ಅಭ್ಯರ್ಥಿಗಳು.

[Candidates with at least fifty (50%) percent marks either in the Bachelor's Degree and/or in the Master's Degree in Sciences/Social Sciences/Humanity, Bachelor's in Engineering or Technology with specialization in Science and Mathematics with 55% marks or any other qualification equivalent thereto, are eligible for admission to the programme.]

**ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ಪ್ರವರ್ಗ-1/ ವಿಕಲಚೇತನ (PWD) ಅಭ್ಯರ್ಥಿಗಳಿಗೆ (ಈ ಮೇಲೆ ತಿಳಿಸಲಾದ ಕನಿಷ್ಠ ಶೇಕಡವಾರು ಅರ್ಹತಾ ಅಂಕಗಳಲ್ಲಿ) ನಿಯಮಾನುಸಾರ ಶೇ.5ರಷ್ಟು ಅಂಕ ವಿನಾಯಿತಿ ಇರುತ್ತದೆ.**

**(ಬಿ)** ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ **(Subsidiary Subjects)** ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ, ಆ ಅಂಕಗಳನ್ನು ಸೇರಿಸಿ ಅರ್ಜಿಯಲ್ಲಿ ಭರ್ತಿ ಮಾಡುವುದು. ಒಂದು ವೇಳೆ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದ ಪದವಿಯ ಅಂಕಪಟ್ಟಿಗಳಲ್ಲಿ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಪರಿಗಣಿಸದಿರುವ ಬಗ್ಗೆ ಅಂಕಪಟ್ಟಿಯ Footnote ನಲ್ಲಿ ನಮೂದಿಸಿದ್ದಲ್ಲಿ, ನಮೂದಿಸಿದಂತೆ ಪರಿಗಣಿಸಿ, ಭರ್ತಿ ಮಾಡುವುದು. ಅಥವಾ ಅಂಕಪಟ್ಟಿಯ Footnote ನಲ್ಲಿ ಅಂಕಗಳನ್ನು ಪರಿಗಣಿಸುವ ಬಗ್ಗೆ ಏನೂ ನಮೂದಿಸದಿದ್ದಲ್ಲಿ, ಅಂಕಪಟ್ಟಿಯಲ್ಲಿನ ಗರಿಷ್ಠ ಅಂಕಗಳು ಮತ್ತು ಪಡೆದ ಅಂಕಗಳನ್ನು ಪರಿಗಣಿಸಿ, ಭರ್ತಿ ಮಾಡುವುದು. ಪದವಿಯ ಎಲ್ಲಾ ವರ್ಷಗಳ/ ಸೆಮಿಸ್ಟರ್‌ಗಳ ಅಂಕಪಟ್ಟಿಗಳಲ್ಲಿ ನಮೂದಿಸಲಾದ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಪರಿಗಣಿಸಲಾಗುವುದು.

**ವಿಶೇಷಸೂಚನೆ** : ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯಲ್ಲಿ ಪದವಿ/ಸ್ನಾತಕೋತ್ತರ ಪದವಿಯ ಅಂಕಗಳನ್ನು ತಪ್ಪಾಗಿ (ಫಲಿತಾಂಶ ಪ್ರಕಟಗೊಳ್ಳದೇ ಅಂದಾಜು ಅಂಕಗಳನ್ನು ನಮೂದಿಸುವ ಅಭ್ಯರ್ಥಿಗಳು) ನಮೂದಿಸಿ, ಆಯ್ಕೆಯಾದಲ್ಲಿ ಅಂತಹವರನ್ನು ಮುಂದಿನ ಪ್ರಕ್ರಿಯೆಗೆ ಪರಿಗಣಿಸಲಾಗುವುದಿಲ್ಲ. ಇದಕ್ಕೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗುತ್ತಾರೆ.

3. ಸರ್ಕಾರಿ/ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು **ಸೇವಾ ಪ್ರಮಾಣ ಪತ್ರ** ಮತ್ತು ಅಭ್ಯಾಸ ಮಾಡಲು ಸಕ್ಷಮ ಅಧಿಕಾರಿಗಳಿಂದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಮತ್ತು **ಸರ್ಕಾರದಿಂದ ಪಡೆದ ಅನುಮತಿ ಪತ್ರ**ಗಳನ್ನು, ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಉದ್ಯೋಗದಾತರಿಂದ ಪಡೆದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ದಾಖಲಾತಿ ಸಮಯದಲ್ಲಿ ಸಲ್ಲಿಸುವುದು. ಸೇವೆಯಲ್ಲಿರುವ ಶಿಕ್ಷಕರಿಗೆ ಯಾವುದೇ ಮೀಸಲಾತಿ/ ವಿನಾಯತಿ ಇರುವುದಿಲ್ಲ.

4. 2022-23ನೇ ಸಾಲಿನ ಬಿ.ಇಡಿ ದಾಖಲಾತಿ ಪ್ರಕಟಣೆ ಹೊರಡಿಸಿದ ದಿನಾಂಕದ ಪೂರ್ವದಲ್ಲಿ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.

**<u>ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:</u>**

(ಅ) **ರಕ್ಷಣಾ ದಳದವರು** :

**1)** ದಿನಾಂಕ: 01-07-2021 ರಿಂದ 30-06-2022 ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ಉತ್ತೀರ್ಣರಾಗಿರಬೇಕು.

**ಅಥವಾ**

**2)** ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗ್ಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

**ಅಥವಾ**

**3)** ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು ಇಂತಹ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಮಾರ್ಗಸೂಚಿಯ ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-02**ರಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ **ಸೈನಿಕ ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

**ಸೂಚನೆ:** (ಅ) ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲಾಗುವುದು.

(ಆ) **ಮಾಜಿ ಸೈನಿಕರು:**

1. ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂಸೇನೆ, ವಾಯುಸೇನೆ ಹಾಗೂ ನೌಕಾ ಸೇನೆಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸುತ್ತಿದ್ದು

ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ ಮತ್ತು ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು.

**ಅಥವಾ**

2. ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

3. ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

4. **ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ,** ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಕರ್ತವ್ಯದಿಂದ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ತಿಳಿಸಿದ ಸಿಬ್ಬಂದಿ.
5. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ.
6. ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರರು.
7. ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ, ಶೌರ್ಯ ಪ್ರಶಸ್ತಿ (ಗ್ಯಾಲಂಟ್ರಿ ಅವಾರ್ಡ್ಸ್) ವಿಜೇತರು, ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ, ದಿನಾಂಕ: 01-07-87ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

**ಸೂಚನೆ:-**

1. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳು ಅಥವಾ ರಾಜ್ಯ ಸರ್ಕಾರ ನಡೆಸುತ್ತಿರುವ ವಿದ್ಯಾ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯನ್ನು ಇಂತಹ ಅಭ್ಯರ್ಥಿಯು ಉತ್ತೀರ್ಣರಾಗಿರಬೇಕು.

2. ಮಾಜಿ ಸೈನಿಕರು ಅಥವಾ ಅವರ ಪತಿ/ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು. ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು "ಮಾರ್ಗಸೂಚಿಯ" ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ-03ರ** ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಪಡೆದ **ಪ್ರಮಾಣ ಪತ್ರ**ವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

**(ಇ) ಗಡಿನಾಡು ಕನ್ನಡಿಗರು:**

ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಪ್ರದೇಶದಲ್ಲಿದ್ದು, ಕನ್ನಡ ಮಾತನಾಡುವ ಕನ್ನಡ/ಕೊಡವ/ತುಳು ಮಾತೃಭಾಷೆಯೊಗಿರುವ ಅಭ್ಯರ್ಥಿಗಳು. ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಧಿಂಗ್ಲಾಜ್ ತಾಲ್ಲೂಕುಗಳು **ಅಥವಾ** ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವವರು. ಈ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.**

1. ಮಾತೃಭಾಷೆ ಕನ್ನಡ, ಕೊಡವ, ತುಳು ಆಗಿರುವ ಬಗ್ಗೆ ವ್ಯಾಸಂಗ ಮಾಡಿದ ಸಂಸ್ಥೆಯ/ಶಾಲೆಯ ಮುಖ್ಯಸ್ಥರಿಂದ **ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ** ಪಡೆದಿರಬೇಕು. ಈ ಪ್ರಮಾಣ ಪತ್ರವು ಆಯಾ ಜಿಲ್ಲಾ ಶಿಕ್ಷಣಾಧಿಕಾರಿ/ಉಪನಿರ್ದೇಶಕರಿಂದ (District Education Officer (DEO)/DDPI) ದೃಢೀಕರಿಸಲ್ಪಟ್ಟಿರಬೇಕು.

ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (**ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)

2. ಅಭ್ಯರ್ಥಿಯು ಕನ್ನಡ ಮಾತನಾಡುವ ವಿವಾದಗ್ರಸ್ಥ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ **ವಾಸಸ್ಥಳದ ಪ್ರಮಾಣ ಪತ್ರ** ಪಡೆದಿರಬೇಕು.
3. ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಗಡಿನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಒಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಈ) **ಹೊರನಾಡು ಕನ್ನಡಿಗರು:**

ಹೊರನಾಡು ಕನ್ನಡಿಗರು ಎಂದರೆ, ಅಭ್ಯರ್ಥಿಯು ದಾಖಲಾತಿ ಬಯಸುವ ವರ್ಷದ ಜುಲೈ 1ಕ್ಕೆ ಕನಿಷ್ಟ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರಬೇಕು ಮತ್ತು ಅವರ ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರಬೇಕು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯ/ ಪರೀಕ್ಷಾ ಮಂಡಳಿ/ ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು **ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಒದಗಿಸಬೇಕು.**

1. ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ಅಭ್ಯರ್ಥಿಯು ವ್ಯಾಸಂಗ ಮಾಡಿದ ಸಂಸ್ಥೆಯ/ ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲಾ ಶಿಕ್ಷಣಾಧಿಕಾರಿ/ಉಪನಿರ್ದೇಶಕರಿಂದ (District Education Officer (DEO)/DDPI) ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (ಈ "ಮಾರ್ಗಸೂಚಿಯ" ಕೊನೆಯಲ್ಲಿ ನಿಗದಿತ **ಅನುಬಂಧ-08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ದಿನಾಂಕ 01-07-2022ಕ್ಕೆ ಅಭ್ಯರ್ಥಿಯು ಕನಿಷ್ಟ ಐದು ವರ್ಷಗಳ ಕಾಲ ಎಂದರೆ ಜುಲೈ 2017 ರಿಂದ ಇಲ್ಲಿಯವರೆಗೆ ಹೊರ ರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗೆಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.
3. ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಒಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಉ) **ಎನ್.ಸಿ.ಸಿ. ಕೆಡೆಟ್ಸ್:**

**(i)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

**ಅಥವಾ**

**(ii)** ಎನ್.ಸಿ.ಸಿ ಮಹಾನಿರ್ದೇಶನಾಲಯ, ಹೊಸದೆಹಲಿ ಇವರು ನಡೆಸುವ ಈ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆವಿಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಟ ಎನ್.ಸಿ.ಸಿ 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)
(ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)
(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ
(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್ ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ)ಯನ್ನು ಪೂರ್ಣಗೊಳಿಸಿರಬೇಕು.

**(iii)** ಎನ್.ಸಿ.ಸಿ. ಮಹಾನಿರ್ದೇಶನಾಲಯ, ಹೊಸದೆಹಲಿ ಮತ್ತು ಡೆಪ್ಯೂಟಿ ಡೈರಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಈ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ "ಬಿ" ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ
(ಆ) ಚಾರಣ ಶಿಬಿರ
(ಇ) ಪರ್ವತಾರೋಹಣ ಕೋರ್ಸು
(ಈ) ಮೂಲ ನಾಯಕತ್ವ ಶಿಬಿರ
(ಉ) ಉನ್ನತ ನಾಯಕತ್ವ ಶಿಬಿರ
(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್
(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

**(iv)** ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು.

1. ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
2. ಅನುಚ್ಛೇದ 1 ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
3. ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
4. ಕರ್ನಾಟಕದಿಂದ ಅನುಚ್ಛೇದ (ii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು **ಎನ್.ಸಿ.ಸಿ. 'ಬಿ'** ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
5. ಕರ್ನಾಟಕದಿಂದ ಅನುಚ್ಛೇದ (iii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
6. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iv) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ.'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
7. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು.

8. ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆ ಮಾಡಿಕೊಳ್ಳಬಹುದು.

**(ಊ) ಎನ್.ಎಸ್.ಎಸ್. ಸ್ವಯಂ ಸೇವಕರು:**

ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಟ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಟ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

**(ಋ) ಕ್ರೀಡಾಪಟುಗಳು:**

ತರಗತಿ 8 ರಿಂದ ಅಂತಿಮ ಪದವಿವರೆಗಿನ ವ್ಯಾಸಂಗದ ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

**ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು :**

1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ
2. ವಿಶ್ವವಿದ್ಯಾಲಯ
3. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ.

ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು. **ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು (ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ) ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು. ಇವರು ಹಕ್ಕು ಹೊಂದಿರುತ್ತಾರೆ.**

## ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲಾತಿ

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇಕಡಾ 1 ರಷ್ಟು ಸೀಟುಗಳನ್ನು ಪ್ರಚಲಿತ ನಿಯಮದನ್ವಯ ತುಂಬಲಾಗುವುದು.

| | | |
|---|---|---|
| 1 | ರಕ್ಷಣಾದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.13 % |
| 2 | ಮಾಜಿ ಸೈನಿಕ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.15 % |
| 3 | ಗಡಿನಾಡು ಕನ್ನಡಿಗ | 0.10 % |
| 4 | ಹೊರನಾಡು ಕನ್ನಡಿಗ | 0.10 % |
| 5 | ಎನ್.ಸಿ.ಸಿ. ಕೆಡೆಟ್ಸ್ | 0.15 % |
| 6 | ಎನ್.ಎಸ್.ಎಸ್. ಸ್ವಯಂ ಸೇವಕರು | 0.13 % |
| 7 | ಕ್ರೀಡಾಪಟುಗಳು | 0.24 % |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಶೇಕಡ 50 ರಷ್ಟು ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹಾಗೂ ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಹಂಚಿಕೆ ಮಾಡಲಾಗುವುದು.

ಆದರೆ ವಿಜ್ಞಾನ ವಿಭಾಗದ ಒಟ್ಟು ಸೀಟುಗಳ ಪೈಕಿ ಶೇಕಡಾ 60 ರಷ್ಟು ಸೀಟುಗಳನ್ನು ಪಿ.ಸಿ.ಎಂ. ಗುಂಪಿನಿಂದಲೂ ಹಾಗೂ ಶೇಕಡ 40 ರಷ್ಟು ಸೀಟುಗಳನ್ನು ಸಿ.ಬಿ.ಝಡ್ ಗುಂಪಿನಿಂದಲೂ ಆಯ್ಕೆ ಮಾಡಲಾಗುವುದು. ಯಾವುದೇ ಒಂದು ಗುಂಪಿನಲ್ಲಿ ಅಂದರೆ ಪಿ.ಸಿ.ಎಂ. ಅಥವಾ ಸಿ.ಬಿ.ಝಡ್ ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದ ಪಕ್ಷದಲ್ಲಿ ಅಂತಹ ಸೀಟುಗಳನ್ನು ಅದೇ ವಿಭಾಗದ ಮತ್ತೊಂದು ಗುಂಪಿನಿಂದ ಆಯ್ಕೆ ಮಾಡಲಾಗುವುದು.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

Different Categories Reservation Policy



**ವಿವಿಧ ಪ್ರವರ್ಗಗಳಿಗೆ ಮೀಸಲಾತಿ:**

ವಿವಿಧ ಪ್ರವರ್ಗಗಳಿಗೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಸರ್ಕಾರಿ ಆದೇಶಗಳ ಮೇರೆಗೆ ಮೀಸಲಾತಿಯಲ್ಲಿ ಬದಲಾವಣೆಯಾಗಬಹುದು.

| | | |
|---|---|---|
| 1 | ಸಾಮಾನ್ಯ ವರ್ಗ | 50% |
| 2 | ಪರಿಶಿಷ್ಟ ಜಾತಿ | 15% |
| 3 | ಪರಿಶಿಷ್ಟ ಪಂಗಡ | 03% |
| 4 | ಪ್ರವರ್ಗ–1 | 04% |
| 5 | ಪ್ರವರ್ಗ–2ಎ | 15% |
| 6 | ಪ್ರವರ್ಗ–2ಬಿ | 04% |
| 7 | ಪ್ರವರ್ಗ–3ಎ | 04% |
| 8 | ಪ್ರವರ್ಗ–3ಬಿ | 05% |

| | | |
|---|---|---|
| 1 | General | 50% |
| 2 | Scheduled Caste | 15% |
| 3 | Scheduled Tribe | 03% |
| 4 | Category - I | 04% |
| 5 | Category - 2A | 15% |
| 6 | Category - 2B | 04% |
| 7 | Category - 3A | 04% |
| 8 | Category - 3B | 05% |

ಮೇಲ್ಕಂಡ ಮೀಸಲಾತಿ ಅನ್ವಯ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮೀಸಲಾತಿಯನ್ನು ಲಭ್ಯವಿರುವ ಮಿತಿಗೆ ಸೀಮಿತಗೊಳಿಸಿ ಸಾಮಾನ್ಯ ವರ್ಗದ ಅಭ್ಯರ್ಥಿಗಳನ್ನು ತುಂಬಲಾಗುವುದು. ಈ ಮೇಲ್ಕಂಡಂತೆ ನೀಡಿದ ಶೇಕಡಾವಾರು ಮೀಸಲಾತಿ ಮಿತಿಯು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಒಳಪಟ್ಟಿರುತ್ತದೆ.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು (ಚಾಲ್ತಿಯಲ್ಲಿರುವ) ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ಮೀಸಲಾತಿಗಳಲ್ಲೂ ಮೀಸಲಾತಿಯನ್ನು ನೀಡಲಾಗುವುದು.

**ಒಳ ಮೀಸಲಾತಿಗಳು:**

| | | |
|---|---|---|
| ಕನ್ನಡ ಮಾಧ್ಯಮದ ಮೀಸಲಾತಿ | ಶೇ. 05 | 1 ರಿಂದ 10 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ |
| ಮಹಿಳಾ ಮೀಸಲಾತಿ | ಶೇ. 30 | ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು. |
| ವಿಶೇಷಚೇತನ ಅಭ್ಯರ್ಥಿಗಳಿಗೆ | ಶೇ. 03 | ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2007 ದಿನಾಂಕ: 26–07–2011 ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೆ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸರ್ಕಾರಿ ಕೋಟಾ ಸೀಟುಗಳ ಗರಿಷ್ಠ ಶೇಕಡಾ 3 ರಷ್ಟು ಸೀಟುಗಳನ್ನು ಮೀಸಲಾಗಿಡಲಾಗುತ್ತದೆ. |

ವಿಶೇಷ ಚೇತನ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರ / UDID ಕಾರ್ಡ್‌ನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಹಾಗೂ ಶೇ.40ಕ್ಕೂ ಹೆಚ್ಚು ಪ್ರಮಾಣದ ಅಂಗವೈಕಲ್ಯವನ್ನು ಹೊಂದಿರುವ ಅಭ್ಯರ್ಥಿಗಳನ್ನು ವಿಕಲಚೇತನ ಮೀಸಲಾತಿಗೆ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ವಿಶೇಷಚೇತನ ಪ್ರಮಾಣ ಪತ್ರ / UDID ಕಾರ್ಡ್‌ನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ಮಾತ್ರ ವಿಶೇಷಚೇತನ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು.

ಶ್ರವಣ ದೋಷದ ಅಭ್ಯರ್ಥಿಗಳು ತಮ್ಮ ಸ್ವಂತ ಜವಾಬ್ದಾರಿಯೊಂದಿಗೆ ನಿಮ್ಹಾನ್ಸ್ ಆಸ್ಪತ್ರೆ (**NIMHANS HOSPITAL**) ಹೊಸೂರು ರಸ್ತೆ, ಬೆಂಗಳೂರು ಅಥವಾ ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಜಯನಗರ ಈಸ್ಟ್, ಭೈರಸಂದ್ರ, ಬೆಂಗಳೂರು ಇಲ್ಲಿ ಆಡಿಯೋಗ್ರಾಂ ಪರೀಕ್ಷೆಗೆ ಒಳಪಟ್ಟು, ಅವರು ನೀಡುವ ವರದಿಯನ್ನು ಜಿಲ್ಲಾ ವೈದ್ಯಕೀಯ ಮಂಡಳಿಯ ಮುಂದೆ ಹಾಜರುಪಡಿಸಿ, ಜಿಲ್ಲಾ ವೈದ್ಯಕೀಯ ಮಂಡಳಿ ನೀಡುವ ವೈದ್ಯಕೀಯ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಇತರ ಮೂಲ ದಾಖಲೆಗಳೊಂದಿಗೆ ಸಲ್ಲಿಸಬೇಕು.

PRINCIPAL
J.S.S. Institute of Education
P.B. 26, SAKALESHPUR-573 134

221.(3)

Reservation Policy document 2023-24 9/9

PRINCIPAL
J.S.S. Institute of Educatio
P.B. 26, SAKALESHPUR-5731..
Hassan Dist.

ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ
ಕಾವೇರಿ ಭವನದ ಎದುರು, ಕೆ.ಜಿ.ರಸ್ತೆ, ಬೆಂಗಳೂರು-09
ದೂರವಾಣಿ-22228805, 22483140, 22483145 email :cackarnataka1@gmail.com

ಸಂಖ್ಯೆ:ಸಿಎಸಿ-05/ಬಿ.ಇಡಿ.ದಾ./12/2023-24 ದಿನಾಂಕ:31/10/2023

## ಅಧಿಸೂಚನೆ

ವಿಷಯ: 2023-24 ನೇ ಸಾಲಿನ ಎರಡು ವರ್ಷಗಳ ಬಿ.ಇಡಿ. ಕೋರ್ಸ್‌ಗೆ ಸರ್ಕಾರಿ ಕೋಟಾದ ಸೀಟುಗಳಿಗೆ ಪ್ರವೇಶ ಮತ್ತು ಹಂಚಿಕೆ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ. ಇಡಿ 27 ಯುಜಿಹೆಚ್ 2023 (ಇ) ದಿನಾಂಕ:18/10/2023
2. ಸರ್ಕಾರಿ ಆದೇಶ ಸಂಖ್ಯೆ. ಇಡಿ: ಡಿಪಿ ಎ ಆರ್ 28 ಎಸ್.ಬಿ.ಸಿ1986 ದಿ:12/12/1986
3. ಸರ್ಕಾರಿ ಆದೇಶ ಸಂಖ್ಯೆ. ಇಡಿ ಸಿಆಸುಇ:01 ಸೆಹಿಮ 2022 ಬೆಂ. ದಿನಾಂಕ:28/12/2022
4. ಸರ್ಕಾರಿ ಆದೇಶ ಸಂಖ್ಯೆ. ಇಡಿ ಸಿಆಸುಇ: 03 ಹೈ ಕ ಕೋ 2019 ದಿನಾಂಕ:01/02/2023
5. ಸರ್ಕಾರಿ ಆದೇಶ ಸಂಖ್ಯೆ. ಇಡಿ 10 ಯುಬಿಸಿ 99, ಬೆಂಗಳೂರು, ದಿನಾಂಕ: 3.6.1999.
6. ಕರ್ನಾಟಕ ರಾಜ್ಯ ಪತ್ರ DPAR 06 PLX 2012 BangaloreDated 06.11.2013 (No.1252).
7. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1253)
8. ಕರ್ನಾಟಕ ರಾಜ್ಯ ಪತ್ರ DPAR 06 PLX 2012 Bangalore Dated 06.11.2013 (No.1255)
9. ಸರ್ಕಾರಿ ಆದೇಶ ಸಂ. ಇಡಿ 212 ಯುಎನ್‌ಇ 2013, ಬೆಂಗಳೂರು, ದಿ: 12-11-2013.
10. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿ: 20-11-2015
11. ಸರ್ಕಾರಿ ಆದೇಶ ಸಂಖ್ಯೆ: ಇಡಿ:442 ಯುಎನ್‌ಇ 2015, ಬೆಂಗಳೂರು ದಿ: 04-12-2015.
12. ಕರ್ನಾಟಕ ಸರ್ಕಾರ,ಕರ್ನಾಟಕ ಸರ್ಕಾರದ ಸಚಿವಾಲಯ,ವಿಧಾನ ಸೌಧ,ಬೆಂಗಳೂರು ಸುತ್ತೋಲೆ ಸಂಖ್ಯೆ: ಸಿಆಸುಇ 81 ಸೇವನೆ 2017 ದಿ:27.02.2018
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ) ಬೆಂಗಳೂರು ರವರ ಪತ್ರ ಸಂ:ಇಡಿ 298 ಯುಆರ್‌ಸಿ 2016 ದಿ:17/10/2016.
14. ಸರ್ಕಾರದ ಪತ್ರ ಸಂಖ್ಯೆ:ಇಡಿ.35.ಯುಜಿಹೆಚ್ 2022 (ಇ), ದಿನಾಂಕ:31-10-2022.
15. ಈ ಕಛೇರಿ ಅ.ಸ. ಪತ್ರ ಸಂಖ್ಯೆ: ಸಿಎಸಿ-05/ಬಿ.ಇಡಿ.ದಾ-12/2023-24, ದಿ:07-09-2023ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಕಾಲೇಜುಗಳ ವಿವರ.

************

2023-24ನೇ ಶೈಕ್ಷಣಿಕ ಸಾಲಿಗೆ ಎರಡು ವರ್ಷಗಳ ಬಿ.ಇಡಿ. ಪದವಿಯ ವ್ಯಾಸಂಗಕ್ಕಾಗಿ ದಾಖಲಾತಿ ಸಂಬಂಧ ಉಲ್ಲೇಖ (15) ರಂತೆ ವಿಶ್ವವಿದ್ಯಾಲಯಗಳಿಂದ ಸಲ್ಲಿಕೆಯಾದ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಇಲಾಖಾ ವೆಬ್‌ಸೈಟ್ https://schooleducation.karnataka.gov.in/ ನ ಮೂಲಕ ಲಾಗಿನ್ ಆಗಿ **"ONLINE " ಮೂಲಕ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.** **"ONLINE APPLICATION FOR ADMISSION TO 2 YEAR B.Ed. COURSE FOR THE YEAR 2023-24"** ಲಿಂಕ್ ಮೂಲಕ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವುದು. ಭರ್ತಿ ಮಾಡುವ ಮುನ್ನ ವೆಬ್‌ಸೈಟ್‌ನಲ್ಲಿರುವ **"Instructions to the candidates"** ಶೀರ್ಷಿಕೆಯಡಿಯಲ್ಲಿ ನೀಡಿರುವ ಮಾಹಿತಿಯಂತೆ ಅರ್ಜಿಗಳನ್ನು ಭರ್ತಿಮಾಡುವುದು. **ಅಭ್ಯರ್ಥಿಗಳು "ONLINE" ಮೂಲಕ ಅರ್ಜಿಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಭರ್ತಿ ಮಾಡಿ. ಅರ್ಜಿ ಸಲ್ಲಿಸಲು ದಿನಾಂಕ 31/10/2023 ರಿಂದ 29/11/22023 ರ ವರೆಗೆ ಆನ್ ಲೈನ್ ನಲ್ಲಿ ಅವಕಾಶ ಇರುತ್ತದೆ.**

- ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡು ತಮ್ಮ **User ID** ಮತ್ತು **Password** ಅನ್ನು ನಮೂದಿಸಿ ಲಾಗಿನ್ ಆಗಿ ಅರ್ಜಿಯನ್ನು ಭರ್ತಿ ಮಾಡಬೇಕು. ಅಭ್ಯರ್ಥಿಯು ತನ್ನ **User name** ಮತ್ತು **Password** ಅನ್ನು ಗೌಪ್ಯವಾಗಿಟ್ಟುಕೊಳ್ಳತಕ್ಕದ್ದು ಮತ್ತು ಆನ್‌ಲೈನ್ ಅರ್ಜಿಯ ಸಂಬಂಧ ಎಷ್ಟೇ ಬಾರಿ **Login** ಆದರೂ ಕಡ್ಡಾಯವಾಗಿ **Logout**

ಆಗಬೇಕಾಗಿರುತ್ತದೆ. ಅಭ್ಯರ್ಥಿಯ **Logout** ಆಗದೇ ಅರ್ಜಿಗಳಲ್ಲಿ ಮಾಹಿತಿಯಲ್ಲಿ ವ್ಯತ್ಯಾಸಗಳುಂಟಾದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕ ಜವಾಬ್ದಾರಿಯಾಗಿರುವುದಿಲ್ಲ.

**<u>I ಆನ್‌ಲೈನ್ ಅರ್ಜಿ ಸಲ್ಲಿಸುವ ವಿಧಾನ:</u>**

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಮೊದಲು ಶಾಲಾ ಶಿಕ್ಷಣ ಇಲಾಖೆಯ ವೆಬ್‌ಸೈಟ್ **<u>https://schooleducation.karnataka.gov.in/</u>** ನಲ್ಲಿ ನೀಡಲಾಗಿರುವ ಸೂಚನೆಗಳನ್ನು ಗಮನಿಸುವುದು.
- ಸ್ಕ್ಯಾನ್ ಮಾಡಿದ ಅಭ್ಯರ್ಥಿಯ ಭಾವಚಿತ್ರ (50KBಗೆ ಮೀರದಂತೆ) ಹಾಗೂ ಸಹಿಯನ್ನು (50KBಗೆ ಮೀರದಂತೆ) ಅಪ್‌ಲೋಡ್ ಮಾಡುವುದು.
- ಅಭ್ಯರ್ಥಿಗಳು ಪರಿಶೀಲನೆಗೆ ಆಯ್ಕೆ ಮಾಡಿಕೊಳ್ಳ ಬಯಸುವ ಜಿಲ್ಲಾ ನೋಡಲ್ ಕೇಂದ್ರ/ ವ್ಯವಸ್ಥಾಪಕ ಕೇಂದ್ರ (ಡಯಟ್/ಸಿ.ಟಿ.ಇ)ಗಳ ಪಟ್ಟಿಯನ್ನು ಅನುಬಂಧ–04ರಲ್ಲಿ ನೀಡಲಾಗಿದ್ದು, ಅಭ್ಯರ್ಥಿಗಳು ಪ್ರವೇಶಾತಿ ಬಯಸುವ ಕಾಲೇಜುಗಳನ್ನು ಆದ್ಯತೆವಾರು ಆಯ್ಕೆ ಮಾಡಬೇಕು ಹಾಗೂ ಪರಿಶೀಲನೆಗೆ ಯಾವುದಾದರೂ ಒಂದು ನೋಡಲ್ ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳಬೇಕು. ಒಮ್ಮೆ ಆಯ್ಕೆ ಮಾಡಲಾದ ಕೇಂದ್ರಗಳ ಬದಲಾವಣೆಗೆ ಅವಕಾಶ ಇರುವುದಿಲ್ಲ. .
- **2023–24ನೇ ಸಾಲಿಗೆ** ವಿಶ್ವವಿದ್ಯಾಲಯಗಳಿಂದ ನೀಡಲಾದ ಬಿ.ಇಡಿ ಕಾಲೇಜುಗಳ ಪಟ್ಟಿಯನ್ನು ಒದಗಿಸಲಾಗಿದೆ.
- ಅಭ್ಯರ್ಥಿಯು ನೀಡುವ ಕಾಲೇಜುಗಳ ಆದ್ಯತೆಯ ಆಯ್ಕೆಯ ಮೇರೆಗೆ ಸೀಟುಗಳ ಹಂಚಿಕೆಯಾಗುವುದರಿಂದ ಗರಿಷ್ಠ ಪ್ರಮಾಣದ ಕಾಲೇಜುಗಳಿಗೆ ಆಯ್ಕೆ ನೀಡಬಹುದಾಗಿರುತ್ತದೆ. (ಆಯ್ಕೆ ಮಿತಿ ಇರುವುದಿಲ್ಲ).
- ಅರ್ಹತಾ ಪಟ್ಟಿಯನ್ನು ಪ್ರಕಟಿಸಿದ ನಂತರ ಅಭ್ಯರ್ಥಿಗಳಿಗೆ ಮರು ಆದ್ಯತೆ (Option Entry) ನಮೂದಿಸಲು ಅವಕಾಶ ನೀಡಲಾಗುವುದು. ಅಭ್ಯರ್ಥಿಗಳು ತಮ್ಮ USER ID ಮತ್ತು PASSWORD ಅನ್ನು ಬಳಸಿ ಮತ್ತೊಮ್ಮೆ ಲಾಗಿನ್ ಆಗಿ ಅನ್‌ಲೈನ್ ಅರ್ಜಿಯ ನಿಗದಿತ ಅಂಕಣದಲ್ಲಿ ನಿಗದಿಪಡಿಸಿರುವ ದಿನಾಂಕದೊಳಗೆ ಆದ್ಯತೆಯನ್ನು (Option Entry/Institution Choice) ಬದಲಾಯಿಸಿಕೊಳ್ಳಬಹುದಾಗಿದೆ. Option Entry ಮಾಡಲು ಪ್ರತೀ ಸುತ್ತಿನ ನಂತರವೂ ಅವಕಾಶ ನೀಡಲಾಗುವುದು.
- ಕಾಲೇಜುಗಳಲ್ಲಿ ಲಭ್ಯವಿರುವ ಕಾಲೇಜುಗಳ ಸೀಟುಗಳನ್ನು ಸರ್ಕಾರದ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮಾನುಸಾರ ಹಂಚಿಕೆ ಮಾಡಲಾಗುತ್ತದೆ. **(ಅಭ್ಯರ್ಥಿಯು ಆದ್ಯತೆ ನೀಡದ ಕಾಲೇಜುಗಳಲ್ಲಿ ಸೀಟು ಲಭ್ಯವಿದ್ದರೂ ಹಂಚಿಕೆಯಾಗುವುದಿಲ್ಲ.)**
- ಅರ್ಜಿ ಶುಲ್ಕವನ್ನು ನೆಟ್ ಬ್ಯಾಂಕಿಂಗ್/ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್ ಅಥವಾ ಬ್ಯಾಂಕ್ ಚಲನ್ (ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕಿನಲ್ಲಿ ಮಾತ್ರ ಚಲನ್ ಮೂಲಕ ಶುಲ್ಕ ಪಾವತಿಸುವುದು) ಮೂಲಕವೇ ಪಾವತಿಸತಕ್ಕದ್ದು. ಇನ್ನಾವುದೇ ರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.
- ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿಸಿದ ನಂತರ ಸಲ್ಲಿಸಿರುವ Online ಅರ್ಜಿಯನ್ನು ಲಾಗಿನ್ ಆಗಿ ಮುದ್ರಿಸಿಕೊಳ್ಳುವದು, ಯಾವುದೇ ಪತ್ರ ವ್ಯವಹಾರಕ್ಕೂ ಈ ಪ್ರತಿಯನ್ನು ಒದಗಿಸುವುದು.
- **ಸರ್ವರ್ ಒತ್ತಡವನ್ನು ತಪ್ಪಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿ ಸಲ್ಲಿಸುವುದು. ಕೇಂದ್ರೀಕೃತ ದಾಖಲಾತಿ ಘಟಕದ ಖಾತೆಗೆ ಶುಲ್ಕದ ಹಣ ಪಾವತಿಯಾದಲ್ಲಿ ಮಾತ್ರ ಆನ್‌ಲೈನ್ ಅರ್ಜಿಯ Printout ಲಭ್ಯವಾಗುತ್ತದೆ.**
- ಅರ್ಜಿಯನ್ನು ಭರ್ತಿ ಮಾಡುವಾಗ ಸರಿಯಾದ ಮಾಹಿತಿಗಳನ್ನು ಭರ್ತಿ ಮಾಡಬೇಕು. ಒಮ್ಮೆ ಭರ್ತಿ ಮಾಡಿ Submit ಮಾಡಿದ ನಂತರ Edit ಗೆ ಅವಕಾಶವಿರುವುದಿಲ್ಲ.
- ರಾಜ್ಯ ಪಠ್ಯಕ್ರಮದ SSLC ಪಾಸಾದ ವಿದ್ಯಾರ್ಥಿಗಳು ತಮ್ಮ ನೊಂದಣಿ ಸಂಖ್ಯೆ ನಮೂದಿಸಿದಲ್ಲಿ ಜನ್ಮ ದಿನಾಂಕ, ತಂದೆ/ತಾಯಿಯವರ ಹೆಸರು Autofetch ಆಗುತ್ತವೆ. CBSE/ICSE ಅಥವಾ ಇತರೆ ರಾಜ್ಯಗಳ ಮಂಡಳಿಗಳಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಎಲ್ಲಾ ಅಂಕಣಗಳನ್ನು ಭರ್ತಿ ಮಾಡಬೇಕು.
- ಆನ್‌ಲೈನ್ ನಲ್ಲಿ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಅಭ್ಯರ್ಥಿಯ ಬ್ಯಾಂಕ್ ಖಾತೆಯಿಂದ ಹಣ ಕಟಾವಣೆಯಾಗಿ ಕೇಂದ್ರೀಕೃತ ದಾಖಲಾತಿ ಘಟಕದ ಖಾತೆಗೆ ಹಣ ಪಾವತಿಯಾಗದಿದ್ದಲ್ಲಿ, ಈ ಕಛೇರಿಯು ಜವಾಬ್ದಾರಿಯಾಗಿರುವುದಿಲ್ಲ. ಈ ಕುರಿತು ತಾವು ವ್ಯವಹರಿಸಿದ ಬ್ಯಾಂಕನ್ನು ಸಂಪರ್ಕಿಸಬಹುದಾಗಿದೆ.

- ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಶುಲ್ಕ ಪಾವತಿಸಿದ ನಂತರ (ಚಲನ್ ಮೂಲಕ ಪಾವತಿಸಿದಲ್ಲಿ ಚಲನ್ ನಂಬರ್ ಅನ್ನು ನೀಡಿದ ಅಂಕಣದಲ್ಲಿ ನಮೂದಿಸುವುದು) ಆನ್‌ಲೈನ್ ಅರ್ಜಿಯಲ್ಲಿ ತಮ್ಮ **User name** ಮತ್ತು **Password** ಅನ್ನು ನಮೂದಿಸಿ ಡೌನ್‌ಲೋಡ್ ಮಾಡಿಕೊಳ್ಳುವುದು.
- ಅಭ್ಯರ್ಥಿಯು ಆನ್‌ಲೈನ್‌ನಲ್ಲಿ ಶುಲ್ಕ ಪಾವತಿ ಮಾಡಲಾಗಿದೆ ಎಂದಾಕ್ಷಣ ಅರ್ಜಿಯು ಸಲ್ಲಿಕೆಯಾಗಿದೆ ಎಂದು ಭಾವಿಸುವಂತಿಲ್ಲ. ಆನ್‌ಲೈನ್ ಅರ್ಜಿಯ ಪ್ರಿಂಟ್‌ಔಟ್ ಬಂದರೆ ಮಾತ್ರ ಅರ್ಜಿಯು ಪರಿಪೂರ್ಣವಾಗಿ ಸಲ್ಲಿಕೆಯಾಗಿದೆ ಎಂದರ್ಥ. ಅಭ್ಯರ್ಥಿಯು ಶುಲ್ಕ ಪಾವತಿಸಿದ ನಂತರ ಆನ್‌ಲೈನ್ ಅರ್ಜಿಯ ಪ್ರಿಂಟ್‌ಔಟ್ ತೆಗೆದುಕೊಳ್ಳುವುದು ಕಡ್ಡಾಯ ಹಾಗೂ ಅರ್ಜಿಯನ್ನು ದಾಖಲಾತಿ ಸಂದರ್ಭದಲ್ಲಿ ಪರಿಶೀಲನೆಗೆ ಒದಗಿಸಬೇಕಾಗಿರುವುದು ಕಡ್ಡಾಯ.
- ಒಂದು ವೇಳೆ ಮುದ್ರಿತ ಅರ್ಜಿಯು ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ **User ID and Password** ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದಾಗಿದೆ. ಅರ್ಜಿ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸಿದ ಎರಡು ದಿನಗಳ ನಂತರವೂ **Payment Status Pending** ಎಂದಿದ್ದಲ್ಲಿ ಅಥವಾ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಕೇಂದ್ರೀಕೃತ ದಾಖಲಾತಿ ಘಟಕದ ಕೆಳಕಂಡ ಸ್ಥಿರ ದೂರವಾಣಿ ಸಂಖ್ಯೆಗಳ ಮೂಲಕ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ.

**ದೂರವಾಣಿ ಸಂಖ್ಯೆಗಳು: 080-22483140, 080-22483145 ಮತ್ತು 080-22228805.**

**"ONLINE"** ಅರ್ಜಿಯಲ್ಲಿ ಅಪೂರ್ಣ ಮಾಹಿತಿ, ತಪ್ಪು ಮಾಹಿತಿ, ದ್ವಂದ್ವ ಮಾಹಿತಿಗಳನ್ನು ನೀಡುವುದರಿಂದ ಉಂಟಾಗುವ ವ್ಯತಿರಿಕ್ತ ಪರಿಣಾಮಗಳಿಗೆ ಅಭ್ಯರ್ಥಿಗಳೇ ಜವಾಬ್ದಾರರಾಗಿರುತ್ತಾರೆ. ಅಂತಹ ಅಭ್ಯರ್ಥಿಗಳ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

**ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಪಾವತಿಸಬೇಕಾದ ಅರ್ಜಿಶುಲ್ಕ**

| ಕ್ರ.ಸಂ | ವಿವರ | ಅರ್ಜಿಶುಲ್ಕ |
|---|---|---|
| 1 | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ/ ಪ್ರವರ್ಗ-1 | ರೂ. 100-00 |
| 2 | ಅಂಗವಿಕಲ ಅಭ್ಯರ್ಥಿಗಳಿಗೆ | ಶುಲ್ಕ ವಿನಾಯಿತಿ ಇರುತ್ತದೆ. |
| 3 | ಇತರೆ ಅಭ್ಯರ್ಥಿಗಳು | ರೂ. 300-00 |

ಬಿ.ಇಡಿ ಕೋರ್ಸಿಗೆ ದಾಖಲಾಗುವ ಸರ್ಕಾರಿ ಕೋಟಾದ ಅಭ್ಯರ್ಥಿಗಳಿಗೆ ಅನ್ವಯಿಸುವ ನಿಯಮ ಹಾಗೂ ಅರ್ಹತೆಗಳು ಅನುದಾನಿತ ಮತ್ತು ಅನುದಾನರಹಿತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಮಂಡಳಿ ಕೋಟಾದಡಿ ದಾಖಲಾಗುವ ಅಭ್ಯರ್ಥಿಗಳಿಗೂ ಅನ್ವಯಿಸುತ್ತದೆ.

**ಷರತ್ತುಗಳು:**

2023-24ನೇ ಸಾಲಿನ ಬಿ.ಇಡಿ ಕೋರ್ಸಿನ ದಾಖಲಾತಿ ಪ್ರಕ್ರಿಯೆ ಹಾಗೂ ಬಿ.ಇಡಿ ಶಿಕ್ಷಣ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ ಈ ಕೆಳಗಿನ ಷರತ್ತುಗಳನ್ವಯ ಬದಲಾವಣೆಗಳಿಗೆ ಒಳಪಡುತ್ತವೆ.

1. ನ್ಯಾಯಾಲಯದ ತೀರ್ಪು ಮತ್ತು ಆದೇಶಗಳು.
2. ಎನ್.ಸಿ.ಟಿ.ಇ. ಮಾರ್ಗಸೂಚಿ.
3. ರಾಜ್ಯ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಹಾಗೂ ಸಂಬಂಧಿತ ಇತರ ಇಲಾಖೆಗಳ ಸರ್ಕಾರಿ ಸುತ್ತೋಲೆ ಹಾಗೂ ಆದೇಶಗಳು.
4. ಕರ್ನಾಟಕ ರಾಜ್ಯದ ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಉಪಕುಲಪತಿಗಳ ನಿರ್ಣಯಗಳು ಮತ್ತು ಆದೇಶಗಳು.
5. ಇತರೆ ಯಾವುದೇ ಸಂವಿಧಾನಬದ್ಧ ಆದೇಶಗಳು.

## II ಅರ್ಹತೆಗಳು:

1. ಸರ್ಕಾರಿ ಕೋಟಾದ ಸೀಟುಗಳಿಗೆ ಅಭ್ಯರ್ಥಿಯು ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಅಭ್ಯರ್ಥಿಯಾಗಿರಬೇಕು.
2. 10+2+3/4 (ಎಸ್.ಎಸ್.ಎಲ್.ಸಿ+2 ವರ್ಷದ ಪಿ.ಯು.ಸಿ + 3ಅಥವಾ4 ವರ್ಷದ ಪದವಿ) ಕ್ರಮದ ವಿದ್ಯಾರ್ಹತೆಯನ್ನು ಹೊಂದಿರಬೇಕು.
3. ಉಲ್ಲೇಖ-12 ರ ಆದೇಶದಂತೆ ಮೂರು ವರ್ಷಗಳ ಡಿಪ್ಲೋಮಾ ಅಥವಾ ಎರಡು ವರ್ಷಗಳ ಐ.ಟಿ.ಐ ಕೋರ್ಸ್ ಅಥವಾ ಎರಡು ವರ್ಷಗಳ ವೃತ್ತಿ ಶಿಕ್ಷಣ ಡಿಪ್ಲೋಮಾ (ಜೆ.ಓ.ಸಿ/ಜೆ.ಓ.ಡಿ.ಸಿ/ಜೆ.ಎಲ್.ಡಿ.ಸಿ) ಅಭ್ಯರ್ಥಿಗಳು ಎನ್.ಐ.ಓ.ಎಸ್ ನ ವತಿಯಿಂದ ನಡೆಸುವ ಒಂದು ಭಾಷಾ ಮತ್ತು ಒಂದು ವಿಷಯದಲ್ಲಿ ಉತ್ತೀರ್ಣರಾದಲ್ಲಿ ಮಾತ್ರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಪಿ.ಯು.ಸಿ.ಗೆ ತತ್ಸಮಾನವೆಂದು ಪರಿಗಣಿಸಬಹುದು.

**"ಕರ್ನಾಟಕದ ಅಭ್ಯರ್ಥಿ ಎಂದರೆ"**

(ಅ) ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಶಿಕ್ಷಣ ಸಂಸ್ಥೆ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ 1ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ. ಅಥವಾ 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯವರೆಗೆ ಕನಿಷ್ಟ 7 ವರ್ಷಗಳ ವ್ಯಾಸಂಗವನ್ನು ಮಾಡಿರಬೇಕು. ಹಾಗೂ

(ಆ) ಎಸ್.ಎಸ್.ಎಲ್.ಸಿ./ 10ನೇ ತರಗತಿ ಅಥವಾ ದ್ವಿತೀಯ ಪಿ.ಯು.ಸಿ./ 12ನೇ ತರಗತಿ ಪರೀಕ್ಷೆಯನ್ನುಕರ್ನಾಟಕದಲ್ಲಿಯೇ ಉತ್ತೀರ್ಣರಾಗಿರಬೇಕು.

(ಇ) ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು 7 ವರ್ಷಗಳ ವ್ಯಾಸಂಗ ಪ್ರಮಾಣ ಪತ್ರವನ್ನು ಸಲ್ಲಿಸಬೇಕಾದ ಅಗತ್ಯವಿಲ್ಲ. ಆದರೆ ಈ ಅಭ್ಯರ್ಥಿಗಳು **ಕರ್ನಾಟಕದಲ್ಲಿ ಕನಿಷ್ಟ 7 ವರ್ಷಗಳು ವಾಸ ಮಾಡಿದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳದ ಪ್ರಮಾಣ ಪತ್ರವನ್ನು ದಾಖಲಾತಿ ಸಮಯದಲ್ಲಿ ಸಲ್ಲಿಸಬೇಕು.**

(ಈ) ಎಸ್.ಎಸ್.ಎಲ್.ಸಿ. ಅಥವಾ ಪಿ.ಯು.ಸಿ. ಪರೀಕ್ಷೆಗಳಿಗೆ ನೇರವಾಗಿ ನೋಂದಣಿ ಮಾಡಿ ಉತ್ತೀರ್ಣರಾದ ಹಾಗೂ ರಾಷ್ಟ್ರೀಯ ಮುಕ್ತ ಶಾಲೆಯಲ್ಲಿ ಅಧ್ಯಯನ ಮಾಡಿ ಉತ್ತೀರ್ಣರಾದ ಅಭ್ಯರ್ಥಿಗಳು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ/ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ **"ಖಾಸಗಿ ಅಭ್ಯರ್ಥಿ"**ಎಂದು ನಮೂದಿಸಿರುವ ಅಂಕಪಟ್ಟಿಯನ್ನಾಗಲೀ ಅಥವಾ ದೃಢೀಕರಣ ಪತ್ರವನ್ನಾಗಲೀ ಸಲ್ಲಿಸಬೇಕು. (ಅಭ್ಯರ್ಥಿಯು ಒಂದು ತರಗತಿ ಅಥವಾ ವರ್ಗದಲ್ಲಿ ಉತ್ತೀರ್ಣರಾಗಲು ಒಂದಕ್ಕಿಂತ ಹೆಚ್ಚು ವರ್ಷಗಳನ್ನು ತೆಗೆದುಕೊಂಡಿದ್ದಲ್ಲಿ ಅಂತಹ ಶೈಕ್ಷಣಿಕ ವರ್ಷಗಳ ವ್ಯಾಸಂಗವನ್ನು ಒಂದು ವರ್ಷ ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು).

ವಿದ್ಯಾರ್ಹತೆ:

**ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಕೆಳಕಂಡಂತೆ ವಿದ್ಯಾರ್ಹತೆಯನ್ನು ಹೊಂದಿರಬೇಕು.**

(ಎ) ಕನಿಷ್ಠ ಶೇ.50 ಅಂಕಗಳೊಂದಿಗೆ ಪದವಿ ಅಥವಾ ಶೇ.50 ಅಂಕಗಳೊಂದಿಗೆ ವಿಜ್ಞಾನ/ಸಾಮಾಜಿಕ ವಿಜ್ಞಾನಗಳು/ ಮಾನವಿಕ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ, ಕನಿಷ್ಠ ಶೇ.55ರಷ್ಟು ಅಂಕಗಳೊಂದಿಗೆ ಇಂಜಿನಿಯರಿಂಗ್‌ನಲ್ಲಿ ಪದವಿ/ವಿಜ್ಞಾನ ಮತ್ತು ಗಣಿತಶಾಸ್ತ್ರದಲ್ಲಿ ಪರಿಣಿತಿ ಪಡೆದಿರುವ ತಂತ್ರಜ್ಞಾನ ಅಥವಾ ಇನ್ನಾವುದೇ ತತ್ಸಮಾನ ವಿದ್ಯಾರ್ಹತೆ

[Candidates with at least fifty (50%) percent marks either in the Bachelor's Degree and/or in the Master's Degree in Sciences/Social Sciences/Humanity, Bachelor's in Engineering or Technology with specialization in Science and Mathematics with 55% marks or any other qualification equivalent thereto, are eligible for admission to the programme.]

**ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ/ಪ್ರವರ್ಗ-1/ ವಿಕಲಚೇತನ (PWD) ಅಭ್ಯರ್ಥಿಗಳಿಗೆ (ಈ ಮೇಲೆ ತಿಳಿಸಲಾದ ಕನಿಷ್ಠ ಶೇಕಡವಾರು ಅರ್ಹತಾ ಅಂಕಗಳಲ್ಲಿ) ನಿಯಮಾನುಸಾರ ಶೇ.5ರಷ್ಟು ಅಂಕ ವಿನಾಯಿತಿ ಇರುತ್ತದೆ.**

(ಬಿ) ಕೆಲವು ವಿಶ್ವವಿದ್ಯಾಲಯಗಳಲ್ಲಿ ಒಂದು ವಿಷಯವನ್ನು (ಉದಾ: Constitution of India, Computer Fundamentals ಇತ್ಯಾದಿ) ಪರೀಕ್ಷಾ ಪೂರಕ ವಿಷಯವನ್ನಾಗಿ **(Subsidiary Subjects)** ಅಧ್ಯಯನ ಮಾಡಬೇಕಾಗಿರುತ್ತದೆ. ಈ ವಿಷಯದ ಅಂಕಗಳನ್ನು ವಿಶ್ವವಿದ್ಯಾಲಯವು ಒಟ್ಟು ಅಂಕಗಳಿಗೆ ಪರಿಗಣಿಸಿದ್ದಲ್ಲಿ, ಆ ಅಂಕಗಳನ್ನು ಸೇರಿಸಿ ಅರ್ಜಿಯಲ್ಲಿ ಭರ್ತಿ ಮಾಡುವುದು. ಒಂದು ವೇಳೆ ಯಾವುದೇ ವಿಶ್ವವಿದ್ಯಾಲಯದಿಂದ ಪಡೆದ ಪದವಿಯ ಅಂಕಪಟ್ಟಿಗಳಲ್ಲಿ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಪರಿಗಣಿಸದಿರುವ ಬಗ್ಗೆ ಅಂಕಪಟ್ಟಿಯ **Footnote** ನಲ್ಲಿ ನಮೂದಿಸಿದ್ದಲ್ಲಿ ಅದರಂತೆ ಕ್ರಮವಹಿಸುವುದು. ಅಂಕಪಟ್ಟಿಯ **Footnote** ನಲ್ಲಿ ಅಂಕಗಳನ್ನು ಪರಿಗಣಿಸುವ ಬಗ್ಗೆ ಏನೂ ನಮೂದಿಸದಿದ್ದಲ್ಲಿ, ಅಂಕಪಟ್ಟಿಯಲ್ಲಿನ ಗರಿಷ್ಠ ಅಂಕಗಳು ಮತ್ತು ಪಡೆದ ಅಂಕಗಳನ್ನು ಪರಿಗಣಿಸಿ, ಭರ್ತಿ ಮಾಡುವುದು. ಪದವಿಯ ಎಲ್ಲಾ ವರ್ಷಗಳ/ಸೆಮಿಸ್ಟರ್‌ಗಳ ಅಂಕಪಟ್ಟಿಗಳಲ್ಲಿ ನಮೂದಿಸಲಾದ ಗರಿಷ್ಠ ಅಂಕಗಳು **(Maximum Marks)** ಹಾಗೂ ಪಡೆದ ಅಂಕಗಳನ್ನು **(Obtained Marks)** ಮೆರಿಟ್‌ಗೆ ಪರಿಗಣಿಸಲಾಗುವುದು.

4. ಸರ್ಕಾರಿ/ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸೇವಾ ಪ್ರಮಾಣ ಪತ್ರ ಮತ್ತು ಅಭ್ಯಾಸ ಮಾಡಲು ಸಕ್ಷಮ ಪ್ರಾಧಿಕಾರದಿಂದ **'ನಿರಾಕ್ಷೇಪಣಾ'** ಪ್ರಮಾಣ ಪತ್ರಗಳನ್ನು ಮತ್ತು ಸರ್ಕಾರದಿಂದ ಪಡೆದ ಅನುಮತಿ ಪತ್ರಗಳನ್ನು, ಅನುದಾನರಹಿತ

ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ತಮ್ಮ ಉದ್ಯೋಗದಾತರಿಂದ ಪಡೆದ 'ನಿರಾಕ್ಷೇಪಣಾ' ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಸಲ್ಲಿಸುವುದು. ಸೇವೆಯಲ್ಲಿರುವ ಶಿಕ್ಷಕರಿಗೆ ಯಾವುದೇ ಮೀಸಲಾತಿ/ ವಿನಾಯತಿ ಇರುವುದಿಲ್ಲ.

5. **2023–24ನೇ ಸಾಲಿನ ಬಿ.ಇಡಿ ದಾಖಲಾತಿ ಪ್ರಕಟಣೆ ಹೊರಡಿಸಿದ ದಿನಾಂಕದ ಪೂರ್ವದಲ್ಲಿ ನಿಗದಿತ ವಿದ್ಯಾರ್ಹತೆಯ ಪರೀಕ್ಷೆ ಬರೆದು ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**

**IV ವಿಶೇಷ ಗುಂಪಿನ ಅರ್ಹತೆಯ ಬಗ್ಗೆ ವಿವರಣೆ:**

(ಅ) ರಕ್ಷಣಾ ದಳದವರು :

1. ದಿನಾಂಕ: 01/07/2021 ರಿಂದ 30/06/2022 ರವರೆಗೆ ಕರ್ನಾಟಕದಲ್ಲಿ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಗಳಲ್ಲಿ ಉತ್ತೀರ್ಣರಾಗಿರಬೇಕು.

**ಅಥವಾ**

2. ನೌಕರಿಗೆ ಸೇರುವಾಗ ತಮ್ಮ ಉದ್ಯೋಗದಾತರಿಗೆ ಘೋಷಣೆ ಮಾಡಿಕೊಂಡಿರುವ ಮೂಲಸ್ಥಾನ ಕರ್ನಾಟಕವಾಗಿದ್ದು, ಪ್ರಸ್ತುತ ಸೇವೆ ಸಲ್ಲಿಸುತ್ತಿರುವ ರಕ್ಷಣಾದಳದವರು ಅಥವಾ ಅವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು. ಇಂತಹ ಅಭ್ಯರ್ಥಿಗಳು ತಮ್ಮ ಮೂಲ ಸ್ಥಾನ ಕರ್ನಾಟಕ ಎಂಬುದರ ಬಗ್ಗೆ ರಕ್ಷಣಾ ವಿಭಾಗದ ರೆಕಾರ್ಡ್‌ಗಳ ಕಛೇರಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

**ಅಥವಾ**

3. ಕರ್ನಾಟಕದಲ್ಲಿ ಒಂದು ವರ್ಷ ಸೇವೆ ಸಲ್ಲಿಸಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು ಮತ್ತು ಕಾಶ್ಮೀರ ಅಥವಾ ಈಶಾನ್ಯ ಭಾಗಗಳಿಗೆ ಕರ್ತವ್ಯದ ಮೇಲೆ ಕಳುಹಿಸಲ್ಪಟ್ಟಿದ್ದು, ಅವರ ಕುಟುಂಬ ಕರ್ನಾಟಕದಲ್ಲಿ ವಾಸಿಸಲು ರಕ್ಷಣಾ ಪ್ರಾಧಿಕಾರದಿಂದ ಅನುಮತಿ ಪಡೆದ ರಕ್ಷಣಾದಳದವರ ಪತಿ ಅಥವಾ ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳು ಇಂತಹ ಅಭ್ಯರ್ಥಿಗಳು ಆಯ್ಕೆಗೆ ಬೇಕಾಗುವ ಅರ್ಹತಾ ಪರೀಕ್ಷೆಯನ್ನು ಕರ್ನಾಟಕ ಸರ್ಕಾರ ನಡೆಸುತ್ತಿರುವ ಅಥವಾ ಅದರಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಉತ್ತೀರ್ಣರಾಗಿರಬೇಕು.

**ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಈ ಮಾರ್ಗಸೂಚಿಯ ಕೊನೆಯಲ್ಲಿ ನೀಡಿರುವ ನಿಗದಿತ ಅನುಬಂಧ–02ರಲ್ಲಿ ತೋರಿಸಿರುವ ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಮೇಲು ಸಹಿ ಮಾಡಿಸಿರುವ ಸೈನಿಕ ಪ್ರಮಾಣ ಪತ್ರವನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.**

**ಸೂಚನೆ:** ರಕ್ಷಣಾದಳದವರು ಹಾಗೂ ಮಾಜಿ ಸೈನಿಕ ಈ ಎರಡು ಗುಂಪುಗಳಲ್ಲಿ ಯಾವುದೇ ಒಂದು ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದ ಪಕ್ಷದಲ್ಲಿ ಮತ್ತೊಂದು ಗುಂಪಿನ ಅರ್ಹ ಅಭ್ಯರ್ಥಿಗಳಿಂದ ಸರ್ಕಾರಿ ಕೋಟಾದ ಸೀಟುಗಳನ್ನು ತುಂಬಲಾಗುವುದು.

(ಆ) ಮಾಜಿ ಸೈನಿಕರು:

1. ಮಾಜಿ ಸೈನಿಕರೆಂದರೆ ಭಾರತೀಯ ರಕ್ಷಣಾದಳಗಳಾದ ಭೂಸೇನೆ, ವಾಯುಸೇನೆ ಹಾಗೂ ನೌಕಾ ಸೇನೆಗಳಲ್ಲಿ ಯಾವುದೇ ದರ್ಜೆಯಲ್ಲಿ ಯೋಧನಾಗಿ ಇಲ್ಲವೆ ಯೋಧನಲ್ಲದೆ ಸೇವೆ ಸಲ್ಲಿಸುತ್ತಿದ್ದು ಮತ್ತು ಸೇವೆಗೆ ಸೇರುವಾಗ ತನ್ನ ಮೂಲ ಸ್ವಗ್ರಾಮ ಕರ್ನಾಟಕದಲ್ಲಿರುವುದೆಂದು ಘೋಷಣೆ ಮಾಡಿರುವ ವ್ಯಕ್ತಿ ಮತ್ತು ಇಂತಹ ಸೇವೆಯಿಂದ ನಿವೃತ್ತಿ ಹೊಂದಿ ನಿವೃತ್ತಿ ವೇತನ ಪಡೆಯುತ್ತಿರುವವರು.

**ಅಥವಾ**

2. ವೈದ್ಯಕೀಯ ಕಾರಣದ ಮೇರೆಗೆ ಮಿಲಿಟರಿ ಸೇವೆಗೆ ಅನರ್ಹನೆಂದು ಅಥವಾ ತನ್ನ ಹತೋಟಿಗೆ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದವರು.

**ಅಥವಾ**

3. ಸ್ವಇಚ್ಛೆಯಿಂದಲ್ಲದೆ ಸಿಬ್ಬಂದಿ ಕಡಿತಗೊಳಿಸಿದ ಪರಿಣಾಮ ಸೇವೆಯಿಂದ ಬಿಡುಗಡೆಯಾದವರು.

ಅಥವಾ

4. **ಸ್ವಇಚ್ಛೆಯಿಂದ ಅಥವಾ ದುರ್ವರ್ತನೆ ಅಥವಾ ಅಸಾಮರ್ಥ್ಯ ಕಾರಣದಿಂದಾಗಿ ಕರ್ತವ್ಯದಿಂದ ತೆಗೆದುಹಾಕಿದ ಅಥವಾ ವಜಾ ಮಾಡಿದ ವ್ಯಕ್ತಿಯನ್ನು ಹೊರತುಪಡಿಸಿ,** ನಿರ್ದಿಷ್ಟ ಅವಧಿ ಪೂರೈಸಿದ ತರುವಾಯ ಕರ್ತವ್ಯದಿಂದ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಯಿಟಿ ಪಡೆದ ವ್ಯಕ್ತಿ ಮತ್ತು ಪ್ರಾಂತೀಯ ಸೇವೆಯ ಈ ಕೆಳಗೆ ತಿಳಿಸಿದ ಸಿಬ್ಬಂದಿ.
5. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರ.
6. ಮಿಲಿಟರಿ ಸೇವೆ ಪರಿಣಾಮ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ಪಿಂಚಣಿದಾರರು.
7. ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನಿಯರಿಂಗ್ ಫೋರ್ಸ್, ಲೋಕ ಸಹಾಯಕ ಸೇನೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಹೊರತುಪಡಿಸಿ, ಶೌರ್ಯ ಪ್ರಶಸ್ತಿ (ಗ್ಯಾಲಂಟ್ರ ಅವಾರ್ಡ್ಸ್) ವಿಜೇತರು, ಮೇಲಿನ ನಾಲ್ಕನೇ ಸಬ್ ಕ್ಲಾಸಿನಲ್ಲಿರುವವರನ್ನು ಹೊರತುಪಡಿಸಿ, ದಿನಾಂಕ: 01/07/1987ಕ್ಕೆ ಮುಂಚೆ ಗೌರವಾನ್ವಿತ ವಿಮುಕ್ತಿ ಹೊಂದಿದ ಹಾಗೂ ಕನಿಷ್ಠ 5 ವರ್ಷಗಳ ಸೇವೆ ಸಲ್ಲಿಸಿದ ವ್ಯಕ್ತಿಯನ್ನು ಮಾಜಿ ಯೋಧನೆಂದು ಪರಿಗಣಿಸಲಾಗುವುದು.

**ಸೂಚನೆ:**

1. ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ವಿದ್ಯಾಸಂಸ್ಥೆಗಳು ಅಥವಾ ರಾಜ್ಯ ಸರ್ಕಾರ ನಡೆಸುತ್ತಿರುವ ವಿದ್ಯಾ ಸಂಸ್ಥೆಯಿಂದ ಅರ್ಹತಾ ಪರೀಕ್ಷೆಯನ್ನು ಇಂತಹ ಅಭ್ಯರ್ಥಿಯು ಉತ್ತೀರ್ಣರಾಗಿರಬೇಕು.
2. ಮಾಜಿ ಸೈನಿಕರು ಅಥವಾ ಅವರ ಪತಿ/ಪತ್ನಿ/ಮಗ/ಅವಿವಾಹಿತ ಮಗಳು ಈ ಸೌಲಭ್ಯಕ್ಕೆ ಅರ್ಹರು.

ಈ ವಿಶೇಷ ಗುಂಪಿನ ಸೌಲಭ್ಯ ಪಡೆಯಲು ಅಭ್ಯರ್ಥಿಯು "ಅಧಿಸೂಚನೆಯ" ಕೊನೆಯಲ್ಲಿ ನೀಡಿರುವ ನಿಗದಿತ **ಅನುಬಂಧ–03ರ** ಮಾದರಿಯಲ್ಲಿ ಸಕ್ಷಮ ಅಧಿಕಾರಿಗಳಿಂದ ಪಡೆದ **ಪ್ರಮಾಣ ಪತ್ರವನ್ನು** ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.

(ಇ) **ಗಡಿನಾಡು ಕನ್ನಡಿಗರು:**

ಗಡಿನಾಡು ಕನ್ನಡಿಗರು ಎಂದರೆ ವಿವಾದಗ್ರಸ್ತ ಪ್ರದೇಶದಲ್ಲಿದ್ದು, ಕನ್ನಡ ಮಾತನಾಡುವ ಕನ್ನಡ/ಕೊಡವ/ತುಳು ಮಾತೃಭಾಷೆಯಾಗಿರುವ ಅಭ್ಯರ್ಥಿಗಳು. ವಿವಾದಗ್ರಸ್ತ ಪ್ರದೇಶಗಳಾದ ಮಹಾರಾಷ್ಟ್ರ ರಾಜ್ಯದ ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ, ಜತ್ ಮತ್ತು ಗಧಿಂಗ್ಲಾಜ್ ತಾಲ್ಲೂಕುಗಳು **ಅಥವಾ** ಕೇರಳ ರಾಜ್ಯದ ಕಾಸರಗೋಡ್ ತಾಲ್ಲೂಕುಗಳಲ್ಲಿ ವಾಸಿಸುವ ಅಭ್ಯರ್ಥಿಗಳು.

**ಈ ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಸಲ್ಲಿಸಬೇಕು.**

1. ಮಾತೃಭಾಷೆ ಕನ್ನಡ, ಕೊಡವ, ತುಳು ಆಗಿರುವ ಬಗ್ಗೆ ವ್ಯಾಸಂಗ ಮಾಡಿದ ಸಂಸ್ಥೆಯ/ ಶಾಲೆಯ ಮುಖ್ಯಸ್ಥರಿಂದ **ವ್ಯಾಸಂಗ ಪ್ರಮಾಣ ಪತ್ರ /ವರ್ಗಾವಣೆ ಪತ್ರ** ಪಡೆದಿರಬೇಕು. ಈ ಪ್ರಮಾಣ ಪತ್ರವು ಆಯಾ ಜಿಲ್ಲಾ ಶಿಕ್ಷಣಾಧಿಕಾರಿ/ಉಪನಿರ್ದೇಶಕರಿಂದ (District Education Officer (DEO)/DDPI) ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (**ಅನುಬಂಧ–08** ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)
2. ಅಭ್ಯರ್ಥಿಯು ಕನ್ನಡ ಮಾತನಾಡುವ ಗಡಿ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆಂಬುದರ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ **ವಾಸಸ್ಥಳದ ಪ್ರಮಾಣ ಪತ್ರ** ಪಡೆದಿರಬೇಕು.
3. ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಗಡಿನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಎಲ್ 2011 (ಭಾ–1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಈ) **ಹೊರನಾಡು ಕನ್ನಡಿಗರು:**

ಹೊರನಾಡು ಕನ್ನಡಿಗರು ಎಂದರೆ, ಅಭ್ಯರ್ಥಿಯು ದಾಖಲಾತಿ ಬಯಸುವ ವರ್ಷದ ಜುಲೈ 1ಕ್ಕೆ ಕನಿಷ್ಠ ಐದು ವರ್ಷಗಳಿಂದ ಕರ್ನಾಟಕ ರಾಜ್ಯದ ಹೊರಗೆ ಮತ್ತು ಭಾರತದ ಪ್ರಾಂತ್ಯದೊಳಗೆ ವಾಸಿಸುತ್ತಿರಬೇಕು ಮತ್ತು ಅವರ ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರಬೇಕು. ಆಯ್ಕೆಗೆ ಬೇಕಾಗುವ ವಿದ್ಯಾರ್ಹತೆ ಪರೀಕ್ಷೆಯನ್ನು ಅಭ್ಯರ್ಥಿಗಳು ಹೊರ ರಾಜ್ಯದ ವಿಶ್ವವಿದ್ಯಾಲಯ/ ಪರೀಕ್ಷಾ ಮಂಡಳಿ/ ಯಾವುದೇ ವಿದ್ಯಾಸಂಸ್ಥೆಯಿಂದ ಪಾಸು ಮಾಡಿರಬೇಕು. ಈ ಸೌಲಭ್ಯ ಪಡೆಯಲು ಅಭ್ಯರ್ಥಿಗಳು **ಕೆಳಕಂಡ ದಾಖಲೆಗಳನ್ನು ದಾಖಲಾತಿಯ ಸಮಯದಲ್ಲಿ ಒದಗಿಸಬೇಕು.**

**1.** ಮಾತೃಭಾಷೆ ಕನ್ನಡ/ಕೊಡವ/ತುಳು ಆಗಿರುವ ಬಗ್ಗೆ ಅಭ್ಯರ್ಥಿಯು ವ್ಯಾಸಂಗ ಮಾಡಿದ ಸಂಸ್ಥೆಯ/ ಶಾಲೆಯ ಮುಖ್ಯಸ್ಥರಿಂದ ಪಡೆದ ವ್ಯಾಸಂಗ ಪ್ರಮಾಣ ಪತ್ರ/ ವರ್ಗಾವಣೆ ಪ್ರಮಾಣ ಪತ್ರ. ಈ ಪ್ರಮಾಣ ಪತ್ರವು ಆಯಾ ಜಿಲ್ಲಾ ಶಿಕ್ಷಣಾಧಿಕಾರಿ/ಉಪನಿರ್ದೇಶಕರಿಂದ (District Education Officer (DEO)/DDPI) ದೃಢೀಕರಿಸಲ್ಪಟ್ಟಿರಬೇಕು. ದೃಢೀಕರಿಸಿದ ಅಧಿಕಾರಿಯ ಹೆಸರು, ವಿಳಾಸ, ದೂರವಾಣಿ ಸಂಖ್ಯೆ ಇವುಗಳನ್ನು ಪ್ರಮಾಣ ಪತ್ರದಲ್ಲಿ ಸ್ಪಷ್ಟವಾಗಿ ನಮೂದಿಸಿರಬೇಕು. (ಅಧಿಸೂಚನೆಯ ಕೊನೆಯಲ್ಲಿ ನಿಗದಿತ **ಅನುಬಂಧ–08**ರಲ್ಲಿ ನೀಡಿರುವ ನಮೂನೆಯಲ್ಲಿಯೇ ಸಲ್ಲಿಸಬೇಕು.)

2. ದಿನಾಂಕ 01/07/2023ಕ್ಕೆ ಅಭ್ಯರ್ಥಿಯು ಕನಿಷ್ಠ ಐದು ವರ್ಷಗಳ ಕಾಲ ಎಂದರೆ ಜುಲೈ 2017 ರಿಂದ ಇಲ್ಲಿಯವರೆಗೆ ಹೊರ ರಾಜ್ಯದಲ್ಲಿ ಸತತವಾಗಿ ವಾಸಿಸಿದ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ತಹಶೀಲ್ದಾರ್‌ರವರಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ.

3. ಭಾರತ ದೇಶದ ಯಾವುದೇ ಭಾಗದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳನ್ನು ಹೊರನಾಡು ಕನ್ನಡಿಗರ ಮೀಸಲಾತಿ ಅಡಿಯಲ್ಲಿ ಸರ್ಕಾರಿ ಆದೇಶ ಸಂ. ಕಸಂವಪ್ರ 73 ಕೆಒಎಲ್ 2011 (ಭಾ-1), ಬೆಂಗಳೂರು ದಿನಾಂಕ: 13.07.2011ರಂತೆ ದಾಖಲಾತಿಗೆ ಪರಿಗಣಿಸಲಾಗುವುದು.

(ಉ) ಎನ್.ಸಿ.ಸಿ. ಕೆಡೆಟ್ಸ್:

1. ಎನ್.ಸಿ.ಸಿ. ಮಹಾನಿರ್ದೇಶನಾಲಯ, ನವದೆಹಲಿ ಇವರು ನಡೆಸುವ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರ ವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

ಅಥವಾ

2. ಎನ್.ಸಿ.ಸಿ ಮಹಾನಿರ್ದೇಶನಾಲಯ, ನವದೆಹಲಿ ಇವರು ನಡೆಸುವ ಕೆಳಕಂಡ ಶಿಬಿರಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರ ವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕರು)
(ಆ) ಅಖಿಲಭಾರತ ತಲ್ (Thal) ಸೈನಿಕ್ ಶಿಬಿರ (ಬಾಲಕಿಯರು)
(ಇ) ಅಖಿಲ ಭಾರತ ನೌಕಾ ಸೈನಿಕ್ ಶಿಬಿರ
(ಈ) ಅಖಿಲ ಭಾರತ ವಾಯು ಸೈನಿಕ್ ಶಿಬಿರ

ಮತ್ತು ಯೂತ್ ಎಕ್ಸ್‌ಚೇಂಜ್ ಪ್ರೋಗ್ರಾಮ್ಸ್ ಮತ್ತು ಫಾರಿನ್ ನಾವೆಲ್ ಕ್ರೂಸ್ ಮತ್ತು ಪರ್ವತಾರೋಹಣ ಸಾಹಸ ಯಾತ್ರೆ (5900 ಮೀಟರುಗಳಿಗಿಂತ ಹೆಚ್ಚು), ಗಾಳಿ ಶಕ್ತಿಯನ್ನು ಮಾತ್ರ ಉಪಯೋಗಿಸಿ ನೌಕಾಯಾನ ಸಾಹಸ ಯಾತ್ರೆ (401 ಕಿ.ಮೀ) ಮೋಟಾರ್ ಸೈಕಲ್ ಸಾಹಸ ಯಾತ್ರೆ (3500 ಕಿ.ಮೀ.ಗಳಿಗಿಂತ ಜಾಸ್ತಿ) ಮತ್ತು ಸೈಕಲಿಂಗ್ ಸಾಹಸ ಯಾತ್ರೆ (1500 ಕಿ.ಮೀ.ಗಳಿಗಿಂತ ಜಾಸ್ತಿ)ಯನ್ನು ಪೂರ್ಣಗೊಳಿಸಿರಬೇಕು.

3. ಎನ್.ಸಿ.ಸಿ. ಮಹಾನಿರ್ದೇಶನಾಲಯ, ನವದೆಹಲಿ ಮತ್ತು ಡೆಪ್ಯೂಟಿ ಡೈರೆಕ್ಟರ್ ಜನರಲ್, ಎನ್.ಸಿ.ಸಿ. ನಿರ್ದೇಶನಾಲಯ, ಕರ್ನಾಟಕ ಮತ್ತು ಗೋವಾ ಇವರು ನಡೆಸುವ ಕೆಳಕಂಡ ಶಿಬಿರ/ ಕೋರ್ಸುಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಮತ್ತು ಕರ್ನಾಟಕ ರಾಜ್ಯದಲ್ಲಿ ತರಗತಿ 8 ರಿಂದ 12 ರವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ "ಬಿ" ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

(ಅ) ರಾಷ್ಟ್ರೀಯ ಭಾವೈಕ್ಯತಾ ಶಿಬಿರ
(ಆ) ಚಾರಣ ಶಿಬಿರ
(ಇ) ಪರ್ವತಾರೋಹಣ ಕೋರ್ಸು
(ಈ) ಮೂಲ ನಾಯಕತ್ವ ಶಿಬಿರ
(ಉ) ಉನ್ನತ ನಾಯಕತ್ವ ಶಿಬಿರ
(ಊ) ರಾಕ್ ಕ್ಲೈಂಬಿಂಗ್ ಟ್ರೈನಿಂಗ್
(ಋ) ಭೂದಳ, ವಾಯುದಳ, ನೌಕಾದಳ ಮತ್ತು ಅವುಗಳ ವೈದ್ಯಕೀಯ ಸೇವೆಗಳು.

4. ಕರ್ನಾಟಕ ರಾಜ್ಯದಲ್ಲಿ 8 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುವ ಸಂದರ್ಭದಲ್ಲಿ ಕನಿಷ್ಠ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು. ಆದರೆ ಎನ್.ಸಿ.ಸಿ. ಕೋಟಾದಡಿಯಲ್ಲಿ ಮೀಸಲಾಗಿರುವ ಸೀಟುಗಳಿಗೆ ಅಭ್ಯರ್ಥಿಗಳನ್ನು ಈ ಕೆಳಗಿನ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು. ಅಥವಾ

1. ಗಣರಾಜ್ಯೋತ್ಸವ ಶಿಬಿರದಲ್ಲಿ ಪಾಲ್ಗೊಂಡು ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
2. ಅನುಚ್ಛೇದ ! ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಭಾಗವಹಿಸಿ ಸ್ವರ್ಣ /ರಜತ /ಕಂಚು ಪದಕವನ್ನು ಪಡೆದು ಅಖಿಲ ಭಾರತ ಅತ್ಯುತ್ತಮ ಕೆಡೆಟ್ ಎಂದು ಪರಿಗಣಿಸಿ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
3. ಕರ್ನಾಟಕದಿಂದ ಗಣರಾಜ್ಯೋತ್ಸವ ದಿನಾಚರಣೆ ಶಿಬಿರದಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.

4. ಕರ್ನಾಟಕದಿಂದ ಅನುಚ್ಛೇದ (ii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
5. ಕರ್ನಾಟಕದಿಂದ ಅನುಚ್ಛೇದ (iii) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ. 'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
6. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳನ್ನು ಪರಿಗಣಿಸುವ ಮೊದಲು ಅನುಚ್ಛೇದ (iv) ರಲ್ಲಿ ನಮೂದಿಸಿರುವ ಶಿಬಿರಗಳಲ್ಲಿ ಪಾಲ್ಗೊಂಡು ಎನ್.ಸಿ.ಸಿ.'ಬಿ' ಸರ್ಟಿಫಿಕೇಟ್ ಹೊಂದಿರುವ ಅಭ್ಯರ್ಥಿಗಳು.
7. ಅನುಚ್ಛೇದ (v) ರಲ್ಲಿನ ಅಭ್ಯರ್ಥಿಗಳು ಅಂದರೆ ಎನ್.ಸಿ.ಸಿ. 'ಬಿ' ಸರ್ಟಿಫಿಕೇಟನ್ನು ಮಾತ್ರ ಹೊಂದಿರುವ ಅಭ್ಯರ್ಥಿಗಳು.
8. ಉಳಿದ ಎನ್.ಸಿ.ಸಿ. ಸೀಟುಗಳಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಮತ್ತು ಉಳಿದ ವರ್ಗಗಳ ಮೀಸಲಾತಿಯ ಅಭ್ಯರ್ಥಿಗಳೊಂದಿಗೆ ಮೆರಿಟ್ ಅನ್ವಯ ಸೀಟನ್ನು ಆಯ್ಕೆ ಮಾಡಿಕೊಳ್ಳಬಹುದು.

**(ಊ) ಎನ್.ಎಸ್.ಎಸ್. ಸ್ವಯಂ ಸೇವಕರು:**

ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ಕನಿಷ್ಟ ಎರಡು ವರ್ಷ ಸೇವೆ ಸಲ್ಲಿಸಿದ್ದು, ಕನಿಷ್ಟ ಎರಡು ಶಿಬಿರಗಳಲ್ಲಿ ಭಾಗವಹಿಸಿದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರ ಹೊಂದಿರುವವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

**(ಋ) ಕ್ರೀಡಾಪಟುಗಳು:**

ತರಗತಿ 8 ರಿಂದ ಅಂತಿಮ ಪದವಿವರೆಗಿನ ವ್ಯಾಸಂಗದ ಎಂಟು ವರ್ಷಗಳ ಅವಧಿಯಲ್ಲಿ ರಾಜ್ಯ/ರಾಷ್ಟ್ರ ಮಟ್ಟದ ಕ್ರೀಡೆ ಅಥವಾ ಆಟೋಟಗಳು ಅಥವಾ ಪಂದ್ಯಾವಳಿಗಳಲ್ಲಿ ಕರ್ನಾಟಕದಿಂದ ಭಾಗವಹಿಸಿರುವ ಅಭ್ಯರ್ಥಿಗಳು.

**ಕ್ರೀಡೆ / ಆಟೋಟಗಳು / ಪಂದ್ಯಾವಳಿಗಳನ್ನು ಆಯೋಜಿಸುವ ಪ್ರಾಧಿಕಾರಗಳು :**

1. ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ
2. ವಿಶ್ವವಿದ್ಯಾಲಯ
3. ಯುವಜನ ಸೇವಾ ಮತ್ತು ಕ್ರೀಡಾ ನಿರ್ದೇಶನಾಲಯ.

ಈ ಸಕ್ಷಮ ಪ್ರಾಧಿಕಾರಗಳು ನೀಡಿರುವ ಪ್ರಮಾಣ ಪತ್ರಗಳನ್ನು ಹಾಜರುಪಡಿಸುವ ಅಭ್ಯರ್ಥಿಗಳು ಕ್ರೀಡಾಪಟುಗಳ ಕೋಟಾದಲ್ಲಿ ಆಯ್ಕೆಯಾಗಲು ಅರ್ಹರು. **ದಾಖಲಾತಿ ಪ್ರಕ್ರಿಯೆಯಲ್ಲಿ ಅನಿವಾರ್ಯ ಬದಲಾವಣೆಗಳನ್ನು ಮಾಡಲು (ಸಲಹಾ ಸಮಿತಿಯ ಅನುಮೋದನೆ ಕಾಯ್ದಿರಿಸಿ) ವಿಶೇಷಾಧಿಕಾರಿಗಳು, ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು. ಇವರು ಹಕ್ಕು ಹೊಂದಿರುತ್ತಾರೆ.**

## V ವಿಶೇಷ ಗುಂಪಿನ ಅಭ್ಯರ್ಥಿಗಳಿಗೆ ಸೀಟುಗಳ ಮೀಸಲಾತಿ

ಲಭ್ಯವಿರುವ ಒಟ್ಟು ಸರ್ಕಾರಿ ಸೀಟುಗಳಲ್ಲಿ ಈ ಕೆಳಕಂಡ ವಿಶೇಷ ಗುಂಪುಗಳಿಗೆ ಕಾಯ್ದಿರಿಸಲಾಗಿರುವ ಶೇಕಡಾ 1 ರಷ್ಟು ಸೀಟುಗಳನ್ನು ಪ್ರಚಲಿತ ನಿಯಮದನ್ವಯ ತುಂಬಲಾಗುವುದು.

| | | |
|---|---|---|
| 1 | ರಕ್ಷಣಾದಳದ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.13 % |
| 2 | ಮಾಜಿ ಸೈನಿಕ ಅಥವಾ ಆ ವ್ಯಕ್ತಿಯ ಪತಿ/ಪತ್ನಿ/ಮಗ/ ಅವಿವಾಹಿತ ಮಗಳು | 0.15 % |
| 3 | ಗಡಿನಾಡು ಕನ್ನಡಿಗ | 0.10 % |
| 4 | ಹೊರನಾಡು ಕನ್ನಡಿಗ | 0.10 % |
| 5 | ಎನ್.ಸಿ.ಸಿ. ಕೆಡೆಟ್ಸ್ | 0.15 % |
| 6 | ಎನ್.ಎಸ್.ಎಸ್. ಸ್ವಯಂ ಸೇವಕರು | 0.13 % |
| 7 | ಕ್ರೀಡಾಪಟುಗಳು | 0.24 % |

ವಿಶೇಷ ಗುಂಪುಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ನಂತರ ಉಳಿಯುವ ಸರ್ಕಾರಿ ಸೀಟುಗಳನ್ನು ಮೆರಿಟ್ ಹಾಗೂ ಮೀಸಲಾತಿಯನ್ವಯ ಶೇಕಡ 50 ರಷ್ಟು ಕಲಾ ಮತ್ತು ವಾಣಿಜ್ಯ ವಿಭಾಗಕ್ಕೆ ಹಾಗೂ ಶೇಕಡ 50 ರಷ್ಟು ವಿಜ್ಞಾನ ವಿಭಾಗಕ್ಕೆ ಪಂಜಿಕೆ ಮಾಡಲಾಗುವುದು.

ಆದರೆ ವಿಜ್ಞಾನ ವಿಭಾಗದ ಒಟ್ಟು ಸೀಟುಗಳ ಪೈಕಿ ಶೇಕಡಾ 60 ರಷ್ಟು ಸೀಟುಗಳನ್ನು ಪಿ.ಸಿ.ಎಂ. ಗುಂಪಿನಿಂದಲೂ ಹಾಗೂ ಶೇಕಡ 40 ರಷ್ಟು ಸೀಟುಗಳನ್ನು ಸಿ.ಬಿ.ಝಡ್ ಗುಂಪಿನಿಂದಲೂ ಆಯ್ಕೆ ಮಾಡಲಾಗುವುದು. ಯಾವುದೇ ಒಂದು ಗುಂಪಿನಲ್ಲಿ ಅಂದರೆ ಪಿ.ಸಿ.ಎಂ. ಅಥವಾ ಸಿ.ಬಿ.ಝಡ್ ಗುಂಪಿನಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ದೊರೆಯದೇ ಇದ್ದ ಪಕ್ಷದಲ್ಲಿ ಅಂತಹ ಸೀಟುಗಳನ್ನು ಅದೇ ವಿಭಾಗದ ಮತ್ತೊಂದು ಗುಂಪಿನಿಂದ ಆಯ್ಕೆ ಮಾಡಲಾಗುವುದು.

**ಸೂಚನೆ:** ಕಲ್ಯಾಣ ಕರ್ನಾಟಕ ವಲಯದ 371(ಜೆ) ಅಧಿನಿಯಮದಡಿಯಲ್ಲಿ ನಿಗದಿಪಡಿಸಿರುವ ನಿಯಮಗಳನ್ನು ಅನುಸರಿಸಿ ಎಲ್ಲಾ ವರ್ಗಗಳಲ್ಲಿ ಮೀಸಲಾತಿಯನ್ನು ನೀಡಲಾಗುವುದು.

## VI ವಿವಿಧ ಪ್ರವರ್ಗಗಳಿಗೆ ಮೀಸಲಾತಿ: Different categories Reservation policy

ವಿವಿಧ ಪ್ರವರ್ಗಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 01 ಸೆಹಿಮ 2022, ಬೆಂಗಳೂರು, ದಿನಾಂಕ:28.12.2022 ರಂತೆ ಈ ಕೆಳಕಂಡಂತೆ ಮೀಸಲಾತಿಯನ್ನು ಅನುಸರಿಸಲಾಗುವುದು. ಆಗಿಂದಾಗ್ಗೆ ಹೊರಡಿಸಲಾಗುವ ಮೀಸಲಾತಿಪ್ರಮಾಣದ ಕುರಿತ ಸರ್ಕಾರಿ ಆದೇಶಗಳನ್ನು ಪಾಲಿಸಲಾಗುತ್ತದೆ.

| | | |
|---|---|---|
| 1 | ಸಾಮಾನ್ಯ ವರ್ಗ | 44% |
| 2 | ಪರಿಶಿಷ್ಟ ಜಾತಿ | 17% |
| 3 | ಪರಿಶಿಷ್ಟ ಪಂಗಡ | 07% |
| 4 | ಪ್ರವರ್ಗ–1 | 04% |
| 5 | ಪ್ರವರ್ಗ–2ಎ | 15% |
| 6 | ಪ್ರವರ್ಗ–2ಬಿ | 04% |
| 7 | ಪ್ರವರ್ಗ–3ಎ | 04% |
| 8 | ಪ್ರವರ್ಗ–3ಬಿ | 05% |

General — 44%
Scheduled caste 17%
Scheduled Tribe 0.7%
category – I 0.4%
category – 2A 15%
category – 2B 0.4%
category – 3A 0.4%
category – 3B 0.5%

ಮೇಲ್ಕಂಡ ಮೀಸಲಾತಿ ಅನ್ವಯ ಅಂತಿಮ ಸುತ್ತಿನ Online Counselling ನಂತರವೂ ಅರ್ಹ ಅಭ್ಯರ್ಥಿಗಳು ದೊರೆಯದೆ ಸೀಟುಗಳು ಉಳಿಕೆಯಾದಲ್ಲಿ ಅವುಗಳನ್ನು ಸಾಮಾನ್ಯ ವರ್ಗದ ಅಭ್ಯರ್ಥಿಗಳಿಂದ ತುಂಬಲಾಗುವುದು.

ಪ್ರವರ್ಗದಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಕಡ್ಡಾಯವಾಗಿ ಚಾಲ್ತಿಯಲ್ಲಿರುವ ನಿಯಮಗಳ ಪ್ರಕಾರ ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಸಲ್ಲಿಸಬೇಕು. ತಪ್ಪಿದಲ್ಲಿ ದಾಖಲಾತಿ ನೀಡಲಾಗುವುದಿಲ್ಲ.

## VII ಒಳ ಮೀಸಲಾತಿಗಳು:

| | | |
|---|---|---|
| ಕನ್ನಡ ಮಾಧ್ಯಮದ ಮೀಸಲಾತಿ | ಶೇ. 05 | 1 ರಿಂದ 10 ನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದವರಿಗೆ |
| ಮಹಿಳಾ ಮೀಸಲಾತಿ | ಶೇ. 30 | ಮಹಿಳಾ ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಪುರುಷ ಅಭ್ಯರ್ಥಿಗಳಿಂದ ತುಂಬಲಾಗುವುದು. |
| ವಿಶೇಷಚೇತನ ಅಭ್ಯರ್ಥಿಗಳಿಗೆ | ಶೇ. 03 | ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2007 ದಿನಾಂಕ: 26/07/2011 ರನ್ವಯ ಅಂಗವಿಕಲ ಅಭ್ಯರ್ಥಿಗಳಿಗೆ ಪ್ರತಿಯೊಂದು ಶಿಕ್ಷಣ ಸಂಸ್ಥೆಯಲ್ಲಿ ಸರ್ಕಾರಿ ಕೋಟಾ ಸೀಟುಗಳ ಗರಿಷ್ಠ ಶೇಕಡಾ 3 ರಷ್ಟು ಸೀಟುಗಳನ್ನು ಮೀಸಲಾಗಿಡಲಾಗುತ್ತದೆ. |

ವಿಶೇಷ ಚೇತನ ಅಭ್ಯರ್ಥಿಗಳು ದಾಖಲಾತಿ ಸಮಯದಲ್ಲಿ ಇತರ ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದಿರುವ ವೈದ್ಯಕೀಯ ಪ್ರಮಾಣ ಪತ್ರ / **UDID** ಕಾರ್ಡ್‌ನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಹಾಗೂ ಶೇ.40ಕ್ಕೂ ಹೆಚ್ಚು ಪ್ರಮಾಣದ ಅಂಗವೈಕಲ್ಯವನ್ನು ಹೊಂದಿರುವ ಅಭ್ಯರ್ಥಿಗಳನ್ನು ವಿಕಲಚೇತನ ಮೀಸಲಾತಿಗೆ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರದಲ್ಲಿ ಅಂಗವಿಕಲತೆಯ ಶೇಕಡಾ ಪ್ರಮಾಣವು ನಮೂದಿತವಾಗಿರಬೇಕು. ವಿಶೇಷಚೇತನ ಪ್ರಮಾಣ ಪತ್ರ / UDID ಕಾರ್ಡ್‌ನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ಮಾತ್ರ ವಿಶೇಷಚೇತನ ಮೀಸಲಾತಿಯಲ್ಲಿ ಪರಿಗಣಿಸಲಾಗುವುದು.



PRINCIPAL
J.S.S. Institute of Education
P.B. 26, SAKALESHPUR-573 134
Hassan Dist

PRINCIPAL
J.S.S. Institute of Education
P.B. 26, SAKALESHPUR-573 134
Hassan Dist